ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue: 55 ಸಂಚಿಕೆ: 55 | Date: 10-03-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಕಾಲವೇ ಎಲ್ಲದಕ್ಕೂ ಉತ್ತರ ಕೊಡಲಿದೆ: ಡಿ.ಕೆ.ಶಿವಕುಮಾರ್ :ಹೈಕಮಾಂಡ್ ಭೇಟಿಯಾದ ಡಿಸಿಎಂ

ನವದೆಹಲಿ, ಕರ್ನಾಟಕದಲ್ಲಿ ಅಧಿಕಾರ ಹಂಚಿಕೆ ಬಿಕ್ಕಟ್ಟು ಮತ್ತಷ್ಟು ಜೋರಾ ಗಿದೆ. ಹೈಕಮಾಂಡ್ ಅವಕಾಶ ಕೊಟ್ಟರೆ ಮುಂದಿನ ಎರಡು ವರ್ಷವೂ ನಾನೇ ಆಯವ್ಯಯ ಮಂಡಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದಾರೆ. ಬಜೆಟ್ ಮುಗಿತುತ್ತಿದ್ದಂಯೆಯೇ ಡಿಕೆಶಿ ಮತ್ತಷ್ಟು ಆಕ್ಟೀವ್ ಆಗಿರುವುದು ಕುತೂಲಹಕ್ಕೆ ಕಾರಣವಾಗಿದೆ.

ಕಲಬುರಗಿ ಜಿಲ್ಲೆಯ ಚಿತ್ತಾಪುರ ಕ್ಷೇತ್ರದಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್ ಅಲ್ಲಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ವಿಮಾನದಲ್ಲಿ ದೆಹಲಿ ಪ್ರಯಾಣ ತೆರಳಿದ್ದು, ಅಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಅಧಿಕಾರ ಹಂಚಿಕೆ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ. ದೆಹಲಿಗೆ ಬಂದಿರುವುದೇ ರಾಜಕೀಯ ಮಾಡಲು, ಎಲ್ಲ ವಿಚಾರಗಳನ್ನು ಮಾತ ನಾಡದೆ ಸುಮ್ಮನೆ ವಾಪಸ್ ಹೋಗುತ್ತೇನಾ?' ಇದು



ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಾಧ್ಯಮ ಪ್ರತಿನಿಧಿಗಳ ಬಳಿ ಕೇಳಿದ ಪ್ರಶ್ನೆ. ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಗುದ್ದಾಟ ತೀವ್ರಗೊಂಡಿರುವ ಸಂದರ್ಭದಲ್ಲೇ ದೆಹಲಿಯ ಜನಪಥದಲ್ಲಿರುವ, ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ನಿವಾಸದಲ್ಲಿ ಹೈಕಮಾಂಡ್ ನಾಯಕರ ಜತೆ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಅವರು ಮಾತುಕತೆ ನಡೆಸಿದ್ದಾರೆ. ನಂತರ ಹೊರಬಂದು ಮಾತನಾಡಿದ ಅವರು, ಅಸ್ಸಾಂ ಚುನಾವಣೆ ವಿಚಾರವಾಗಿ ಹೈಕಮಾಂಡ್ ಜತೆ ಮಾತನಾಡಿರುವುದಾಗಿ ತಿಳಿಸಿದರು.

ಕಾಲವೇ ಎಲ್ಲದಕ್ಕೂ ಉತ್ತರ ಕೊಡಲಿದೆ: ಡಿಕೆಶಿ ಮಾರ್ಮಿಕ ಮಾತು ಕಾಲವೇ ಎಲ್ಲದಕ್ಕೂ ಉತ್ತರ ಕೊಡಲಿದೆ ಎಂದು ಮಾರ್ಮಿಕವಾಗಿ ಮಾತನಾಡಿದ ಡಿಕೆ ಶಿವಕುಮಾರ್, ರಾಹುಲ್ ಗಾಂಧಿ ಬಳಿ ಚರ್ಚೆ ಮಾಡಿದ್ದೆನೆ ಎಂಬುದನ್ನು ನಿಖರವಾಗಿ ಹೇಳಿಲ್ಲ. ಡಿಕೆ ಶಿವಕುಮಾರ್ ಮೊದಲು ಪ್ರಿಯಾಂಕಾ ಗಾಂಧಿ ಜೊತೆ ಅಸ್ಸಾಂ ಚುನಾವಣೆ ಬಗ್ಗೆ ಚರ್ಚೆ ನಡೆಸಿದ್ದರು. ನಂತರ ರಾಹುಲ್ ಗಾಂಧಿ ಜೊತೆ ಚರ್ಚಿಸಿದ್ದರು. ಡಿಕೆ ಶಿವಕುಮಾರ್ ಮತ್ತು ಡಿಕೆ ಸುರೇಶ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಸಿ ವೇಣುಗೋಪಾಲ್ ಜತೆ ಮಾತುಕತೆ ನಡೆಸಿದ್ದರು. ಈ ಭೇಟಿ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಅದರ ಬೆನ್ನಲ್ಲೇ ಇದೀಗ ಅಸ್ಸಾಂ ಚುನಾವನೆ ನೆಪದಲ್ಲಿ ಹೈಕಮಾಂಡ್ ನಾಯಕರ ಜತೆ ಡಿಕೆ ಶಿವಕುಮಾರ್ ಮಾತುಕತೆ ನಡೆಸಿದ್ದಾರೆ.

ಏತನ್ಮಧ್ಯೆ, ಸೋನಿಯಾ ಗಾಂಧಿ ಅವರು ಡಿಕೆ ಶಿವಕುಮಾರ್ ಪರ ಒಲವು ಹೊಂದಿದ್ದಾರೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು



ತಿಳಿಸಿವೆ. ಆದರೆ, ಮುಖ್ಯವಾದ ಜವಾಬ್ದಾರಿಗಳನ್ನು, ನಿರ್ಧಾರಗಳನ್ನು ರಾಹುಲ್ ಗಾಂಧಿ ಅವರೇ ತೆಗೆದುಕೊಳ್ಳುತ್ತಿರುವುದರಿಂದ, ನಾಯಕತ್ವ ಬದಲಾವಣೆ ವಿಚಾರವಾಗಿ ಅವರ ಮನವೊಲಿಸುವ ಅಗತ್ಯ ಡಿಕೆ ಶಿವಕುಮಾರ್‌ಗೆ ಎದುರಾಗಿದೆ. ಇದೀಗ ಆ ಪ್ರಯತ್ನಕ್ಕೆ ಅವಕಾಶ ಸಿಕ್ಕಿದ್ದು, ಅದರಲ್ಲಿ ಡಿಕೆಶಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.

35 ವರ್ಷಗಳಿಂದ ಒಳ ಮೀಸಲಾತಿಗಾಗಿ ನಿರಂತರ ಅನೇಕ ಹೋರಾಟ:ಮಾದಾರ ಮಹಾಸಭಾ ಅಧ್ಯಕ್ಷ ವಿಭೂತಿ ಸಿದ್ದಪ್ಪ

ಕೊರಟಗೆರೆ ; ಸುಪ್ರಿಂ ಕೋಟ್ ಅದೇಶ ಉಲ್ಲಂಘಿಸಿ ಒಳ ಮೀಸಲಾತಿ ಜಾರಿ ಆಗದೇ 56432 ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ವಿರುದ್ದ ಕರ್ನಾಟಕ ಮಾದರ ಮಹಾ ಸಭಾ ಕೊರಟಗೆರೆ ತಾಲೂಕು ಘಟಕ ಪ್ರತಿಭಟನೆ ನಡೆಸಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿ ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಕರ್ನಾಟಕ ಮಾದರ ಮಹಾ ಸಭಾ ಕೊರಟಗೆರೆ ತಾಲೂಕು ಘಟಕ ಅಧ್ಯಕ್ಷ ಸಿದ್ದೇಶ್(ವಿಭೂತಿ) ರಾಜ್ಯದಲ್ಲಿ ಶೋಷಿತ ಸಮುದಾಯಗಳು ಕಳೆದ 35 ವರ್ಷಗಳಿಂದ ಒಳ ಮೀಸಲಾತಿಗಾಗಿ ನಿರಂತರ ಅನೇಕ ಹೋರಾಟಗಳನ್ನು ಮಾಡಿದ್ದು ಸುಪ್ರೀಂ ಕೋರ್ಟ್ ಆದೇಶದಂತೆ ಸಾಮಾಜಿಕ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆ ಆಧಾರದ ಮೇಲೆ ಒಳ ಮೀಸಲಾತಿ ಜಾರಿಯಾಗಬೇಕು, ಒಳ ಮೀಸಲಾತಿ ವಿಚಾರವಾಗಿ ರಾಜ್ಯ ಸರ್ಕಾರ ಸ್ಪಷ್ಟ ಕ್ರಮ ಕೈಗೊಳದೆ ಲೆಕ್ಕಕ್ಕೆ ಮಾತ್ರ ಒಳ ಮೀಸಲಾತಿ ಜಾರಿ ನಮಗೆ ಅವಶ್ಯಕವಿಲ್ಲಾ ಕಾನೂನು ಬದ್ದವಾಗಿ ಸಂವಿಧಾನದ ಅಡಿಯಲ್ಲಿ



ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿ ಆಗಬೇಕೆಂದು ಮತ್ತು 2022 ಹೊಸ ಮೀಸಲಾತಿಯನ್ನು ಸಂವಿಧಾನ 9ನೇ ಷಡ್ಯೋಲ್‌ಗೆ ಸೇರಿಸಲು ಸರ್ವ ಪಕ್ಷಗಳ ಸಬೆ ಕರೆದು ಪ.ಜಾತಿಗರ ಶೇ.17, ಪ.ಪಂಗಡಕೆಕ ಶೇ.7 ರಷ್ಟು ಮೀಸಲಾತಿಯನ್ನು ಜಾರಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಜಿಲ್ಲಾ ಮಾದರ ಮಹಾ ಸಭಾದ ಪಧಾದಿಕಾರಿಕ ದಾಡಿವೆಂಕಟೇಶ್ ಮಾತ ನಾಡಿ ರಾಜ್ಯ ಸರ್ಕಾರ ತೆಗೆದ ುಕೊಂಡಂತ ಒಳ ಮೀಸಲಾತಿ ಜಾರಿಗಾಗಿ ಬೆಳಗಾವಿ ಅಧಿವೇ ಶನದಲ್ಲಿ ಪ್ರವರ್ಗ–ಎ ಶೇ.6, ಪ್ರವರ್ಗ–ಬಿ ಶೇ.6, ಪ್ರವಗ ್ರ–ಸಿ ಶೇ.5 ರಂತೆ ತಿರ್ಮಾ ನ ತೆಗೆದುಕೊಂಡು ತಮ್ಮ ಗಳ ಅನುಮೋದನೆಗೆ ಸಲ್ಲಿಸಿದ್ದನ್ನು ರಾಜ್ಯ ಸರ್ಕಾರವೇ ಅನುವೋದಿಸಿದ್ದರು ಸಹ ಒಳ ಮೀಸಲಾತಿ ಇಲ್ಲದೇ 56432 ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ರಾಜ್ಯದ ಮುಖ್ಯಮಂತ್ರಿಗಳು ಹಳೇ ಪದ್ದತಿಯಲ್ಲೇ ಶೇ.50 ರಷ್ಟು ಮೀಸಲಾತಿ ಹಾಗೂ ಅದರಲ್ಲಿ ಪರಿಶಿಷ್ಟ ಜಾತಿಗೆ ಶೇ.15 ರಂತೆ ಹುದ್ದೆಗಳನ್ನು ತುಂಬಲು ತೀರ್ಮಾನಿಸಿರುವುದುರಿಂದ ನಮ್ಮ ಮಾದಿಗ ಹಾಗೂ ಸಂಬಂದಿಸಿದ 16 ಉಪಜಾತಿಗಳನ್ನು ಒಳಗೊಂಡ ಪ್ರವರ್ಗ–ಎ ಗುಂಪಿಗೆ ಬಡ ವಿದ್ಯಾರ್ಥಿ ಗಳ ಹೊಟ್ಟೆ ಮೇಲೆ ಹೊಡೆದು ಅವರ ಜೀವನನ್ನೆ ಕಿತ್ತುಹೊಳ್ಳುತ್ತಿದ್ದು ಸರಿ ಸುಮಾರು 3500 ಹುದ್ದೆಗಳು ಜನಾಂಗದ ಸರ್ಕಾರಿ ನೌಕರಿ ಬಯಸುತ್ತಿದ್ದ ನಿರುದ್ಯೋಗಿಗಳ ಬದುಕನ್ನೆ ಸರ್ವ ನಾಶ ಮಾಡುತ್ತಿರುವುದು ಘೋರ ಅನ್ಯಾಯವಾಗಿದ್ದು ತಕ್ಷಣ ಪ್ರಸ್ತುತ ನೇಮಕಾರಿಯನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಆದೇದಂತೆ ಒಳ ಮೀಸಲಾತಿ ಜಾರಿ ಗೊಳಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಮಾದರ ಮಹಾ ಸಭಾ ಉಪಾಧ್ಯಕ್ಷ ಮಂಜುನಾಥ, ಕಾರ್ಯದರ್ಶಿ ಆರ್.ಲಕ್ಷ್ಮಿನರಸಯ್ಯ, ಖಜಾಂಚಿ ವೀರಕ್ಯಾತರಾಯ, ಪದಾಧಿಕಾರಿಗಳಾದ ನಾಗರಾಜು, ಬೀಮರಾಜು, ಎ.ವಿ.ವೀರಕ್ಯಾತರಾಯ, ಸುಬ್ರಾಯಪ್ಪ, ರವಿಕುಮಾರ್, ನರಸಿಂಹಯ್ಯ, ಸಿದ್ದೇಶ್, ಸಿದ್ದಗಂಗಯ್ಯ, ಹನುಮಂತರಾಯಪ್ಪ, ಮುನಿರಾಜು, ಕೃಷ್ಣಪ್ಪ, ಶಿವಣ್ಣ, ರಮೇಶ್, ತೇಜಸ್, ಯೋಗೀಶ್, ಶಿವರಾಜು, ನರಸಿಂಹಯ್ಯ, ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಜನಗಣತಿ ಅಂಕಿ–ಅಂಶಗಳೇ ಅಭಿವೃದ್ಧಿಗೆ ಆಧಾರ: ಗಣತಿ ಕಾರ್ಯಾಗಾರದಲ್ಲಿ ಶುಭ ಕಲ್ಯಾಣ್ ಕಿವಿಮಾತು

ತುಮ ಕೂರು: ಜನಗಣತಿಯ ಅಂಕಿ–ಅಂಶಗಳೇ ಅಭಿವೃದ್ಧಿಗೆ ಆಧಾರವಾಗಿರುವುದರಿಂದ ಗಣತಿದಾರರು ಜವಾಬ್ದಾರಿಯಿಂದ ಗಣತಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ತುಮಕೂರು ಮಹಾನಗರ ಪಾಲಿಕೆಯಲ್ಲಿ ಸೋಮವಾರ ಭಾರತ ಜನಗಣತಿ–2027ರ ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಜನಗಣತಿಯ ಅಂಕಿ–ಅಂಶಗಳೇ ಆಧಾರವಾಗಿರುತ್ತದೆ. ಸರ್ಕಾರ ' ರೂಪಿಸುವ ಯೋಜನೆಗಳು, ಕ್ಷೇತ್ರ ವಿಂಗಡಣೆ ಎಲ್ಲವೂ ಜನಸಂಖ್ಯೆ ಆಧಾರದ ಮೇಲೆಯೇ ನಿರ್ಧಾರ'ವಾಗುತ್ತದೆ. ಆದ್ದರಿಂದ ಈ ಕಾರ್ಯದಲ್ಲಿ ನಿಯೋ ಜಿತರಾದ ಅಧಿಕಾರಿ ಸಿಬ್ಬಂದಿ ಯಾವುದೇ ಪೂರ್ವ ಗ್ರಹವಿಲ್ಲದೆ, ಸರಿಯಾದ ಮಾಹಿತಿಯನ್ನು ಕ್ರೋಢೀಕರಿಸಬೇಕು ಎಂದರು.

1948ರ ಜನಗಣತಿ ಕಾಯ್ದೆಯ ಪ್ರಕಾರ ಜನಗಣತಿ ಕಾರ್ಯ ವನ್ನು ಕೈಗೊಳ್ಳಬೇಕಾಗಿದೆ ಎಂದ ಅವರು, 1972ರಲ್ಲಿ ಮೊದಲ ಗಣತಿ ನಡೆದಿದ್ದು, ಅದರ ಬಳಿಕ



ಜನಸಂಖ್ಯೆಯ ನಿಖರ ಮಾಹಿತಿಯನ್ನು ಸಂಗ್ರಹಿಸುವುದು ಸರ್ಕಾರ'ದ ಯೋಜನೆಗಳ ಜಾರಿಗೆ ಪ್ರಮುಖವಾಗಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಅಲೆಮಾರಿ ಸಮುದಾಯಗಳಿಗೆ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ ಜಿಲ್ಲೆಯ ಮಟ್ಟದಲ್ಲಿ ಸಮಗ್ರ ಮಾಹಿತಿ ಅಗತ್ಯವಿದೆ. ಜನಗಣತಿ ಮೂಲಕ ಸಂಗ್ರಹವಾಗುವ ಅಂಕಿ–ಅಂಶಗಳು ಅದಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು. ಇದಲ್ಲದ ' ಲೋಕಸಭೆ, ವಿಧಾನಸಭೆ, ಗ್ರಾಮ ಪಂಚಾಯಿ ್ತ ಕ್ಷೇತ್ರಗಳ ರಚನೆಯೂ ಜನಸಂಖ್ಯೆ ಆಧಾರಿತವಾಗಿರುವುದರಿಂದ ಅಧಿಕಾರಿಗಳು ಜನಗಣತಿ ಕಾರ್ಯವನ್ನು ನಿಖರವಾಗಿ ಹಾಗೂ ಸಮಪ ್ರಕವಾಗಿ ನಡೆಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು. ಸಂವಹ 'ನ, ವಿಶ್ವಾಸಾರ್ಹತೆ ಹಾಗೂ ಮಾಹಿತಿ ಸಂಗ್ರಹ ಗಣತಿಯ ಪ್ರಮುಖ ಅಂಶಗಳು, ಈ ಹಿನ್ನೆ ಲೆಯಲ್ಲಿ ದೇಶದ ಸಾಮಾ ಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಹಾಗೂ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಗಣತಿ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ.

ಈ ಕಾರ್ಯಾಗಾರ ನಾಯಕತ್ವ ವಹಿಸಿಕೊಳ್ಳಬೇಕಾದ ಕಾಯ ್ರಕ್ರಮವಾಗಿದ್ದು, ಆರಂಭದಲ್ಲಿ ನಿರಾಸಕ್ತಿ ಹುಟ್ಟಿಸಬಹುದು. ಆದರೆ ಜವಾಬ್ದಾರಿ ಮತ್ತು ಕರ್ತವ್ಯ ಎಂಬುದನ್ನು ಮರೆಯಬಾರದು. ತಮ್ಮ ಸಂದೇಹಗಳನ್ನು ಇಲ್ಲಿಯೇ ಬಗೆಹರಿಸಿಕೊಂಡು ಹೋಗಬೇಕು ಎಂದರು. ಕಾರ್ಯಾಗಾರದಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ, ಜನಗಣತಿ ಸಂಪನ್ಮೂಲ ವ್ಯಕ್ತಿಗಳಾದ ಆರ್. ಎಸ್. ಶರ್ಮಾ, ಭವ್ಯ ಇದ್ದರು.

ವಿದ್ಯಾರ್ಥಿಗಳು ಭಯ ಮುಕ್ತವಾಗಿ ಬರೆಯಲು ಸಕಲ ಸಿದ್ಧತೆ

ಕುಣಿಗಲ್ :ತಾಲೂಕಿನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನ ವಿದ್ಯಾರ್ಥಿಗಳು ಭಯ ಮುಕ್ತವಾಗಿ ಬರೆಯಲು ಸಕಲ ಸಿದ್ಧತೆಯನ್ನ ಕೈಗೊಳ್ಳಲಾಗಿದೆ ಎಂದು ತಾಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳಾದ ಕರಿಯಾನಾಯ್ಕ ತಿಳಿಸಿದರು.

ಪಟ್ಟಣ ದ ಆಡಳಿತ ಸೌಧ ಕಂದಾಯ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಎಸ್ ಎಸ್ ಎಲ್ ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಾರ ಮಾರ್ಚ್ 18 ರಿಂದ ಏಪ್ರಿಲ್ 2 ರವರೆಗೆ ಜರಗಲಿದ್ದು ತಾಲೂಕು ಆಡಳಿತ ಹಾಗೂ ಶಿಕ್ಷಣ ಇಲಾಖೆ ಜೊತೆಗೆ ವಿವಿಧ ಇಲಾಖೆಗಳ ಸಹಕಾ ರದೊಂದಿಗೆ ತಾಲೂಕಿನಲ್ಲಿ ಪರೀಕ್ಷೆಗೆ ಸಕಲ ಸಿದ್ಧತೆಯನ್ನ ಮಾಡಿಕೊಳ್ಳಲಾಗಿದೆ ಈ ಸಾಲಿನಲ್ಲಿ 3,125 ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರೀಕ್ಷೆ ಬರೆಯುತ್ತಿದ್ದು ಅವರಿಗೆ ಅನಾನುಕೂಲವಾಗದಂತೆ ಸಕಲ ಸಿದ್ಧತೆಯನ್ನ ಕೈಗೊಳ್ಳಲಾಗಿದೆ ತಾಲೂಕಿನ 10 ಕೇಂದ್ರಗಳಲ್ಲಿ ಪರೀಕ್ಷಾ ನಡೆಸಲಿದ್ದು ಮಹಾತ್ಮ ಗಾಂಧಿ ಪದವಿ ಪೂರ್ವ ಕಾಲೇಜು, ಬಿಜಿಎಸ್, ಜ್ಞಾನಭಾರತಿ,ಸರ್ಕಾರಿ ಕಾಲೇಜು ಭಕ್ತರಹಳ್ಳಿ, ಹುಲಿಯೂರುದುರ್ಗ, ಅಮೃತೂರು,ಯಡಿಯೂರಿನ ಸಿದ್ದಲಿಂಗೇಶ್ವರ ಕಾಲೇಜು. ಉರಿಗದ್ದಿಗೇಶ್ವರ ಪ್ರೌಢಶಾಲಾ ಸ್ಥಳದ'ಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ,ಆರೋಗ್ಯ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರೊಂದಿಗೆ ಪ್ರತಿ ಪ'ರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನ ಅಳವಡಿಸಿ ವೆಬ್ ಕ್ಯಾಸ್ಟಿಂಗ್ ಮಾಡಲಾಗುವುದು,ಮುಕ್ತ ನ್ಯಾಯ ಸಮತವಾದ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದು ವಿದ್ಯಾರ್ಥಿಗಳು ಭಯಪಡದೆ ಪರೀಕ್ಷೆ ಬರೆಯಲು ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದು ತಿಳಿಸುತ್ತಾ ಪರೀಕ್ಷಾ ಕೊಠಡಿಗಳಿಗೆ ಬೆಸ್ಕಾಂ ಇಲಾಖೆಯವರು ವಿದ್ಯುತ್ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಬೇಕು ಕೆಎಸ್ ಆರ್ ಟಿಸಿ ಬಸ್ಸುಗಳಲ್ಲಿ ಪರೀಕ್ಷೆ ಬರೆಯಲು ಬರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯಕ್ಕೆ ತಲುಪಿಸಲು ಯಾವುದೇ ಅಡಚಣೆ ಉಂಟುವಮಾಡಬಾರದಾಗಿ ತಿಳಿಸುತ್ತಾ ಪ್ರತಿ ಪರೀಕ್ಷಾ ಕೇಂದ್ರದ 100 ಮೀಟರ್ ಸುತ್ತಳತೆಯಲ್ಲಿ ಪೊಲೀಸ್ ಭದ್ರತೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂ ದರ್ಭದಲ್ಲಿ ತಾಲೂಕು ಪಂಚಾಯಿತಿ ಕಾಯ ್ರನಿರ್ವಾಹಣಾಧಿಕಾರಿ ವಸಂತ್ ಕುಮಾರ್,ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಮಮತಾ ಮಣಿ, ಅಮೃತೂರು ಪೊಲೀಸು ವೃತ್ತ ನಿರೀಕ್ಷಕರಾದ ನವೀನ್ ಗೌಡ,ಕುಣಿಗಲ್ ಪೊಲೀಸ್ ಇನ್ಸ್ಪೆಕ್ಟರ್ ಎಂ ನಾಯಕ್, ಬೆಸ್ಕಾಂ ಕಾರ್ಯಪಾಲಕ ಅಭಿಯಂತರರಾದ ವೀರಭದ್ರಚಾರ್, ಖಜಾನೆ ಅಧಿಕಾರಿಗಳು, ಪುರಸಭೆ ಆರೋಗ್ಯ ನಿರೀಕ್ಷಕರಾದ ಶ್ರೀಕಾಂತ್, ಕೆ ಎಸ್ ಆರ್ ಟಿ ಸಿ ಡಿಪೋ ಮ್ಯಾನೇಜರ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

ಕುಟುಂಬದ ಏಳ್ಗೆಗಾಗಿ ಶ್ರಮಿಸುವುದೇ ಮಹಿಳೆಯ ಸಾಧನೆ

ಚಿಕ್ಕನಾ ಯಕನ'ಹಳ್ಳಿ:ತನ್ನ ಕುಟುಂಬದ ಪ್ರತಿಯೊಬ್ಬ ಸದಸ್ಯರ ಏಳಿಗೆಗಾಗಿ ಶ್ರಮಿಸಿ, ಅವರನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುವುದೇ ಒಬ್ಬ ಮಹಿಳೆಯ ಜೀವನದ ಅತ್ಯಂತ ದೊಡ್ಡ ಸಾಧನೆಯಾಗಿದೆ ಎಂದು ತಹಶೀಲ್ದಾರ್ ಮಮತಾ ಎಂ. ಆಶಯ ವ್ಯಕ್ತಪಡಿಸಿದರು. ಪಟ್ಟಣದ ತೀನಂಶ್ರೀ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ರ ಸಂಘ'ದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮಹಿಳಾ ದಿನಾಚರಣೆ' ಹಾಗೂ 'ಮಹಿಳಾ ಸಾಧಕ'ರಿಗೆ ಸನ್ಮಾನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಗೆ ಕೇವಲ ವರ್ಷದ ಒಂದು ದಿನವಷ್ಟೇ ಗೌರವ ಸೀಮಿತವಾಗಬಾರದು. ಸಮಾಜದಲ್ಲಿ ಗೌರವ ಸಿಗುವಂತೆ ಪ್ರತಿಯೊಬ್ಬ ಮಹಿಳೆಯೂ ಸಾಧನೆ ಮಾಡಬೇಕು ಮತ್ತು ಪ್ರತಿದಿನವೂ ಆ ಗೌರವಕ್ಕೆ ಭಾಜನರಾಗಬೇಕು.



ಮೊದಲು ಹೆಣ್ಣು ಮತ್ತೊಬ್ಬ ಹೆಣ್ಣಿಗೆ ಗೌರವ ನೀಡುವ ಗುಣ ಬೆಳೆಸಿಕೊಳ್ಳಬೇಕು. ಮಹಿಳೆಯರಿಂದಲೇ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆಗಳು ನಿಲ್ಲಬೇಕು. ನಮ್ಮೊಳಗೆ ನಾವು ಮೊದಲು ಸಮಾನತೆಯನ್ನು ಕಂಡುಕೊಂಡಾಗ ಮಾತ್ರ ಸಮಾಜದಿಂದ ಸಮಾನತೆಯನ್ನು ನಿರೀಕ್ಷಿಸಲು ಸಾಧ್ಯ ಎಂದು ಹೇಳಿದರು.

ಪ್ರತಿಯೊಬ್ಬ ಮಹಿಳೆಯಲ್ಲೂ ಅದ್ಭುತ ಶಕ್ತಿಯಿದೆ. ಆ ಶಕ್ತಿಯು ನಮಗೆ ಎದುರಾಗುವ ಸಮಸ್ಯೆಗಳ ಸಂದರ್ಭದಲ್ಲಿ ಹಾಗೂ ದೊರೆಯುವ ಅವಕಾಶ'ಗಳಲ್ಲಿ ಅನಾವರಣಗೊಳ್ಳುತ್ತದೆ. ಅದನ್ನು ಸದ್ಬಳಕೆ ಮಾಡಿಕೊಂಡು ಯಾವುದೇ ಕ್ಷೇತ್ರದಲ್ಲಾದರೂ ಮುನ್ನಡೆಯಬೇಕು ಎಂದರು.ಹೆಣ್ಣು ಕಲಿತರೆ ಒಂದು ಕುಟುಂಬ ಮಾತ್ರವಲ್ಲ, ಇಡೀ ಸಮಾಜವೇ ಕಲಿತಂತೆ ಎಂಬ ಮಾತಿದೆ. ಇದು ಮಹಿಳೆಗೆ ಇರುವ ದಿವ್ಯ ಶಕ್ತಿಯನ್ನು ಬಿಂಬಿಸುತ್ತದೆ. ಸಂಭ್ರಮಾಚರಣೆಗಳು ಕೇವಲ ವೇದಿಕೆಗೆ ಸೀಮಿತವಾಗದೆ, ಪ್ರಾಯೋಗಿಕವಾಗಿ ಪ್ರತಿ ದಿನವೂ ಪ್ರತಿ ಕ್ಷೇತ್ರದಲ್ಲೂ ಮಹಿಳೆಯರಿಗೆ ಸೂಕ್ತ ಅವಕಾಶ ಮತ್ತು ಸ್ಥಾನಮಾನಗಳು ದೊರೆಯುವಂತಾಗಬೇಕು ಎಂದು ಕರೆ ನೀಡಿದರು.

ಈ ಸಂ ದರ್ಭದ'ಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ ಗವಿರಂಗಯ್ಯ, ನಿಕಟಪೂರ್ವ ಅಧ್ಯಕ್ಷ ಆರ್ ಪರಶಿವಮೂರ್ತಿ, ಸಿಡಿಪಿಓ ಹೊನ್ನಪ್ಪ, ದೇವರಾಜು, ಪ್ರಿಯಾಂಕ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸಾಧನೆಗೆ ಬಡತನ ಎಂದಿಗೂ ಅಡ್ಡಿಯಾಗುವುದಿಲ್ಲ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂ ದ ವಿದ್ಯಾ ರ್ಥಿನಿಲಯಗಳಲ್ಲಿನ ವಿದ್ಯಾರ್ಥಿ ಗಳಿಗೆ ಸ್ಪರ್ಧಾತ್ಮಕ ಪರಿಕ್ಷೆಗಳು ಮತ್ತು ವೃತ್ತಿ ಮಾರ್ಗದರ್ಶನ ತರಬೇತಿ ಕಾಯ ್ರಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣಾ ಇಲಾಖೆ ಯಿಂದ ಮಕ್ಕಳಿಗೆ ಸ್ಪರ್ಧಾ ್ತಮಕ ಮನೋಭಾವ ಭಿತ್ತುವ ಕೆಲಸ ಮಾಡುತ್ತಿದ್ದು ವಿದ್ಯಾರ್ಥಿಗಳೆಲ್ಲರೂ ಇಲಾಖೆಯ ಸೌಲಭ್ಯಗಳನ್ನು ಪಡೆದುಕೊಂಡು ಉತ್ತಮ ಅಧಿಕಾರಿಗಳಾಗಿ ಸೇವೆ ಸಲ್ಲಿಸಬೇಕು. ನಾನೂ ಕೂಡ ಹಿಂದಳಿದ ವರ್ಗಗಳ ಕಲ್ಯಾಣ ಇಲಾಖೆ ವಿದ್ಯಾರ್ಥಿನಿಲದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿ ಎಂದು ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯಾವುದೇ ಜಾತಿ, ಧರ್ಮ, ಸ್ಥಳಗಳ ಬೇಧಭಾವಗಳು ಇರುವುದಿಲ್ಲ ಎಲ್ಲಾರು ಮುಕ್ತವಾಗಿ ಬರೆಯಬಹುದು ಎಂದು ತಿಳಿಸಿದರು. ಪ್ರಾಸ್ತಾವಿಕ ಮಾತುಗಳಾಡಿದ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಕೆ ಎಂ ಜಯರಾಮರವರು ಇಲಾಖೆಯಿಂದ ನೀಡುತ್ತಿರುವ ಸೌಲಭ್ಯಗಳನ್ನು ಕುರಿತು ಸಮಗ್ರ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದ ಶ್ರೀಮತಿ ವೇದಲಕ್ಷ್ಮೀ ಜಿ ರವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇತಿಹಾಸದ ವಿಷಯದಿಂದ ಯಾವ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ ಎಂದು ಸಮಗ್ರವಾಗಿ ಮಂಡಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ



ಮಂಜುನಾಥ ಬಿ ರವರು ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಪೂರ್ವ ಸಿದ್ದತೆ ಎಂಬ ವಿಷಯದ ಬಗ್ಗೆ ಮಾತನಾಡುತ್ತ ಸಾಧನೆ ಎಂಬುದು ಸಮಗ್ರವಾಗಿ ಮತ್ತು ನಿರಂತರವಾಗಿ ಅಧ್ಯಯನ ಮಾಡಿದರೆ ಮಾತ್ರ ದಕ್ಕುವಂತದ್ದು ಎಂದು ತಿಳಿಸಿದರು. ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಚನ್ನಕೇಶವ ಮೂರ್ತಿಯವರು ವೈಜ್ಞಾನಿಕ ಕೃಷಿ ಮತ್ತು ಸಾವಯವ ಕೃಷಿಯ ಬಗ್ಗೆ ಮಾತನಾಡಿದರು. ಸಿಡಿಪಿಓ ರವರಾದ ಶ್ರೀ ಕುಮಾರ್ ನಾಯಕ್ ರವರು ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳು ಮತ್ತು ಪೋಕ್ಸಾ ಕಾಯ್ದೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಈ ಸಮಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಸಿಬ್ಬಂದಿಗಳಾದ ಓಬಳೇಶ , ಅಂಜನ್ ಕುಮಾರ್, ಲಕ್ಷ್ಮಿ ರಂಗನಾಥ ಹಾಗೂ ವಾರ್ಡನ್ ಗಳಾದ ರಾಮಮೋಹನ್, ಹೈದರಾಲಿ, ಸಣ್ಣಪ್ಪ, ಅಕ್ಕಮ್ಮ, ಅರುಣಾ ಕುಮಾರಿ, ಲಕ್ಷ್ಮೀ, ಮೀನಾಕ್ಷಮ್ಮ ಹಾಗೂ ಇಲಾಖೆಯ ಹಾಜರಿದ್ದರು.

ಟಿ20 ವಿಶ್ವಕಪ್ ಪಂದ್ಯದಲ್ಲಿ ಮೂರನೇ ಬಾರಿಗೆ ಗೆದ್ದು ಬಿಗಿದ ಭಾರತ

ಹಾಲಿ ಚಾಂಪಿಯನ್ ಟೀಂ ಇಂಡಿಯಾ 2026ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿದೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಕಿವೀಸ್ ವಿರುದ್ಧ ಭಾರತದ ಮೊದಲ ಗೆಲುವು ಇದಾಗಿದೆ. ಅಭಿಷೇಕ್ ಶರ್ಮಾ ಮತ್ತು ಸಂಜು ಸ್ಯಾಮ್ಸನ್ ಅವರ ಅಮೋಘ ಬ್ಯಾಟಿಂಗ್ ಪ್ರದರ್ಶನದಿಂದ ಭಾರತ 255 ರನ್‌ಗಳ ಬೃಹತ್ ಮೊತ್ತ ಗಳಿಸಿತು. ನಂತರ ಭಾರತೀಯ ಬೌಲರ್‌ಗಳು ಕಿವೀಸ್ ಬ್ಯಾಟರ್‌ಗಳನ್ನು ಕಟ್ಟಿಹಾಕಿ ಐತಿಹಾಸಿಕ ಗೆಲುವಿಗೆ ಕಾರಣರಾದರು.

2024 ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಟೀಂ ಇಂಡಿಯಾ, ದಕ್ಷಿಣ ಆಫ್ರಿಕಾವನ್ನು ಮಣಿಸಿ ಎರಡನೇ ಬಾರಿಗೆ ಟಿ20 ವಿಶ್ವಕಪ್ ಹಿಡಿದು ಇಲ್ಲಿಗೆ 617 ದಿನಗಳು ಕಳೆದಿವೆ. ಇದೀಗ ಈ 617 ದಿನಗಳ ನಂತರ ಹಾಲಿ ಚಾಂಪಿಯನ್ ಟೀಂ ಇಂಡಿಯಾ ತನ್ನ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅಹಮದಾಬಾದ್‌ನ ಮೋದಿ ಮೈದಾನದಲ್ಲಿ ನಡೆದ 2026 ರ ಟಿ20 ವಿಶ್ವಕಪ್ ಫೈನಲ್ ನಲ್ಲಿ ನ್ಯೂಜಿಲೆಂಡ್ ತಂಡವನ್ನು ಏಕಪಕ್ಷೀಯವಾಗಿ ಸೋಲಿಸಿದ ಟೀಂ ಇಂಡಿಯಾ ತನ್ನ ಮೂರನೇ ಟಿ20 ವಿಶ್ವಕಪ್ ಟ್ರೋಫಿಗೆ ಮುತ್ತಿಕ್ಕಿತು. ವಾಸ್ತವವಾಗಿ ಈ ಆವೃತ್ತಿಯಲ್ಲಿ ಉಭಯ ತಂಡಗಳು ಅದ್ಭುತ ಪ್ರದರ್ಶನ ನೀಡಿ ಫೈನಲ್‌ಗೇರಿದ್ದವು. ಹೀಗಾಗಿ ಈ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಲಾಗಿತ್ತು. ಇದಕ್ಕೆ ಕಾರಣವೂ ಇತ್ತು. ಅದೇನೆಂದರೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಟೀಂ ಇಂಡಿಯಾ, ಕಿವೀಸ್ ವಿರುದ್ಧ ಗೆದ್ದೇ ಇರಲಿಲ್ಲ. ಹೀಗಾಗಿ ಅದೊಂದು ಭಯದೊಂದಿಗೆ ಅಖಾಡಕ್ಕಿಳಿದಿದ್ದ ಟೀಂ ಇಂಡಿಯಾ ಪಂದ್ಯದ ಆರಂಭದಿಂದಲೇ ಕಿವೀಸ್ ಮೇಲೆ ಸವಾರಿ ಮಾಡಿತು. ಇದರ ಪರಿಣಾಮವಾಗಿ ಭಾರತದ ಮುಂದೆ ಮಂಡಿಯೂರಿದ ಕಿವೀಸ್, ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತದ ವಿರುದ್ಧ ಮೊದಲ ಸೋಲು ಅನುಭವಿಸುವುದರ ಜೊತೆಗೆ ಚಾಂಪಿಯನ್ ಪಟ್ಟದಿಂದಲೂ ವಂಚಿತವಾಯಿತು.

ಭಾರತಕ್ಕೆ ಸ್ಫೋಟಕ ಆರಂಭ

ಮೋದಿ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ರನ್ ಮಳೆಯೇ ಹರಿಯಿತು. ಕಿವೀಸ್ ಬೌಲರ್‌ಗಳನ್ನು ಮೊದಲ ಓವರ್‌ನಿಂದಲೇ ತರಾಟೆಗೆ ತೆಗೆದುಕೊಂಡ ಟೀಂ ಇಂಡಿಯಾ ಬ್ಯಾಟರ್‌ಗಳು ಆರಂಭದಲೇ ಕಿವೀಸ್ ಪಡೆಯನ್ನು ಪಂದ್ಯದಿಂದ ಹೊರಹಾಕಿದರು. ಉಳಿದ ಕೆಲಸವನ್ನು ತಂಡದ ಬೌಲರ್‌ಗಳು ಮಾಡಿ ಮೂಗಿಸಿದರು.



ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾಕ್ಕೆ ಉತ್ತಮ ಆರಂಭ ಸಿಕ್ಕಿತು. ಇಡೀ ವಿಶ್ವಕಪ್‌ನಲ್ಲಿ ರನ್ ಬರ ಎದುರಿಸಿದ್ದ ಅಭಿಷೇಕ್ ಶರ್ಮಾ ಕೊನೆಗೂ ಲಯ ಕಂಡುಕೊಳ್ಳುವುದರೊಂದಿಗೆ 18 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.

ಸಂಜು ಹ್ಯಾಟ್ರಿಕ್ ಅರ್ಧಶತಕ

ಇತ್ತ ಎಂದಿನಂತೆ ತನ್ನ ಅಮೋಘ ಫಾರ್ಮ್ ಮುಂದುವರೆಸಿದ ಸಂಜು ಸ್ಯಾಮ್ಸನ್, ಸತತ ಮೂರನೇ ಪಂದ್ಯದಲ್ಲಿ ಅರ್ಧಶತಕ ಪೂರೈಸುವುದರ ಮೂಲಕ ಹ್ಯಾಟ್ರಿಕ್ ಅರ್ಧಶತಕ ದಾಖಲಿಸಿದರು. ಈ ಜೋಡಿಯ ಅಬ್ಬರದಿಂದಾಗಿ ಟೀಂ ಇಂಡಿಯಾ ಮೊದಲ ವಿಕೆಟ್‌ಗೆ 98 ರನ್ ಕಲೆಹಾಕಿತು. ಇದಕ್ಕೆ ತೆಗೆದುಕೊಂಡಿದ್ದು ಕೇವಲ 43 ಎಸೆತಗಳು ಮಾತ್ರ. 52 ರನ್ ಬಾರಿಸಿದ ಅಭಿಷೇಕ್ ಶರ್ಮಾ ವಿಕೆಟ್ ಪತನದೊಂದಿಗೆ ಈ ಜೊತೆಯಾಟ ಮುರಿದುಬಿತ್ತು. ಆನಂತರ ಬಂದ ಇಶಾನ್ ಕಿಶನ್, ಸಂಜು ಸ್ಯಾಮ್ಸನ್ ಜೊತೆಗೂಡಿ ರನ್ ವೇಗವನ್ನು ಮತ್ತಷ್ಟು ಹೆಚ್ಚಿಸಿದರು. ಇವರಿಬ್ಬರು ಶತಕದ ಜೊತೆಯಾಟವನ್ನು ಹಂಚಿಕೊಳ್ಳುವ ಮೂಲಕ ತಂಡವನ್ನು 200 ರನ್‌ಗಳ ಗಡಿ ದಾಟಿಸಿದರು.

ದಾಖಲೆಯ 255 ರನ್‌ಗಳ ಗುರಿ

ಕೇವಲ 15.1 ಓವರ್‌ಗಳಲ್ಲಿ ತಂಡವನ್ನು 200 ರನ್‌ಗಳ ಗಡಿ ದಾಟಿಸಿದ ಈ ಜೋಡಿ ಸ್ಯಾಮ್ಸನ್ ವಿಕೆಟ್ ಪತನದೊಂದಿಗೆ ಬೇರ್ಪಟ್ಟಿತು. ಸತತ ಮೂರನೇ ಪಂದ್ಯದಲ್ಲೂ ಶತಕ ವಂಚಿತರಾದ ಸಂಜು ಸ್ಯಾಮ್ಸನ್ 89 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಸಂಜು ಬೆನ್ನಲ್ಲೇ ಇಶಾನ್ ಕಿಶನ್ ಕೂಡ 54 ರನ್‌ಗಳಿಗೆ ಪೆವಿಲಿಯನ್ ಸೇರಿಕೊಂಡರು. ನಾಯಕ ಸೂರ್ಯಕುಮಾರ್ ಯಾದವ್‌ಗೆ ಖಾತೆ ತೆರೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಜಿಮ್ಮಿ ನಿಶಮ್ ಎಸೆದ ಈ ಓವರ್‌ನಲ್ಲಿ ಭಾರತ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಆದ್ದರಿಂದ ತಂಡದ ರನ್ ವೇಗಕ್ಕೆ ಬ್ರೇಕ್ ಬಿದ್ದಿತು. ಆದಾಗ್ಯೂ ಕೊನೆಯ ಓವರ್‌ನಲ್ಲಿ ಶಿವಂ ದುಬೆ (26 ರನ್) ಅಬ್ಬರಿಸುವ ಮೂಲಕ ತಂಡವನ್ನು 255 ರನ್‌ಗಳಿಗೆ ಕೊಂಡೊಯ್ದರು.

ಆರಂಭದಲ್ಲೇ ಸೋಲೊಪ್ಪಿಕೊಂಡ ಕಿವೀಸ್

ಈ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್‌ಗೆ ಮೊದಲ ಓವರ್‌ನಲ್ಲೇ ಆಘಾತ ಎದುರಾಗುವುದರಲಿತ್ತು. ಆದರೆ ಶಿವಂ ದುಬೆ, ಫಿಲ್ ಆಲೆನ್ ಅವರ ಸುಲಭ ಕ್ಯಾಚ್ ಕೈಚೆಲಿದರು. ಸೆಮಿಫೈನಲ್‌ನಲ್ಲಿ ದಾಖಲೆಯ ಶತಕ ಬಾರಿಸಿದ್ದ ಆಲೆನ್ ಕ್ಯಾಚ್ ಬಿಟ್ಟಿದ್ದು, ಅಭಿಮಾನಿಗಳಲ್ಲಿ ಆತಂಕ ಮೂಡಿಸಿತು. ಇದಕ್ಕೆ ಪೂರಕವಾಗಿ ಸೈಫರ್ಟ್ ಮುಂದಿನ ಓವರ್‌ನಲ್ಲಿ ಬರೋಬ್ಬರಿ 21 ರನ್ ಬಾರಿಸಿದರು. ಇದು ತಂಡವನ್ನು ಒತ್ತಡಕ್ಕೆ ತಳ್ಳಿದಂತೆ ಕಾಣುತ್ತಿತ್ತು. ಆದರೆ ಮೂರನೇ ಓವರ್‌ನಲ್ಲಿ ದಾಳಿಗಿಳಿದ ಅಕ್ಷರ್ ಆಲೆನ್ ಇನ್ನಿಂಗ್ಸ್‌ಗೆ ಅಂತ್ಯ ಹಾಡಿದರು. ನಂತರ ಬಂದ ರಚಿನ್ ರವೀಂದ್ರಗೆ ಜಸ್ಪ್ರೀತ್ ಬುಮ್ರಾ ಮೊದಲ ಎಸೆತದಲ್ಲೇ ಪೆವಿಲಿಯನ್ ದಾರಿ ತೋರಿಸಿದರು. ಸ್ಫೋಟಕ ಬ್ಯಾಟ್ಸ್‌ಮನ್ ಗ್ಲೆನ್ ಫಿಲಿಫ್ಸ್ ಆಟವೂ 5 ರನ್‌ಗಳಿಗೆ ಅಂತ್ಯವಾಯಿತು. ಹೀಗಾಗಿ ಕಿವೀಸ್ 47 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ತಂಡದ ಪರ ಏಕಾಂಗಿ ಹೋರಾಟ ನೀಡಿದ ಆರಂಭಿಕ ಟಿಮ್ ಸೈಫರ್ಟ್ 26 ಎಸೆತಗಳಲ್ಲಿ 52 ರನ್ ಬಾರಿಸಿ ಏಕಾಂಗಿ ಹೋರಾಟ ನೀಡಿದರು. ಆದರೆ ಅವರು ಕೂಡ ವರುಣ್ ಬೌಲಿಂಗ್ ನಲ್ಲಿ ಸಿಕ್ಸರ್ ಬಾರಿಸುವ ಯತ್ನದಲ್ಲಿ ಕಿಶನ್‌ಗೆ ಕ್ಯಾಚಿತ್ತು ಔಟಾದರು. ಸೈಫರ್ಟ್ ಔಟಾಗುತ್ತಿದ್ದಂತೆ ಕಿವೀಸ್ ಸೋಲು ಖಚಿತವಾಯಿತು. ಅದರಂತೆ ಆ ಬಳಿಕ ಬಂದ ಕಿವೀಸ್ ಬ್ಯಾಟರ್‌ಗಳು ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು. ಒಂದು ತುದಿಯಲ್ಲಿ ಹೋರಾಟ ನೀಡಲು ಯತ್ನಿಸಿದ ನಾಯಕ ಸ್ಯಾಂಟ್ನರ್ 43 ರನ್‌ಗಳ ಇನ್ನಿಂಗ್ಸ್ ಆಡಿದರಾದರೂ ತಂಡವನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಕಿವೀಸ್ 159 ರನ್‌ಗಳಿಸಲಷ್ಟೇ ಶಕ್ತವಾಗಿ 96 ರನ್ ಗಳಿಂದ ಸೋಲೊಪ್ಪಿಕೊಂಡಿತು.

ಪ್ರಶಂಸಿಸಿದ ಧೋನಿ

2026: 2026ರ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಚಾಂಪಿಯನ್ ಪಟ್ಟದೊಂದಿಗೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಮೂರು ಬಾರಿ ಟ್ರೋಫಿ ಎತ್ತಿ ಹಿಡಿದ ಮೊದಲ ತಂಡವೆಂಬ ಹೆಗ್ಗಳಿಕೆಗೆ ಟೀಮ್ ಇಂಡಿಯಾ ಪಾತ್ರವಾಗಿದೆ. ಇದಕ್ಕೂ ಮುನ್ನ ಭಾರತ ತಂಡವು 2007 ಮತ್ತು 2024 ರಲ್ಲಿ ಚಾಂಪಿಯನ್ ಪಟ್ಟಕ್ಕೇರಿತ್ತು. ಇದೀಗ ಮತ್ತೊಮ್ಮೆ ವಿಶ್ವ ಕಿರೀಟ ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಐತಿಹಾಸಿಕ ಕ್ಷಣಗಳಿಗೆ ಈ ಹಿಂದಿನ ವಿಶ್ವಕಪ್ ವಿಜೇತ ನಾಯಕರುಗಳು ಸಾಕ್ಷಿಯಾಗಿದ್ದರು. ಅಂದರೆ ಮಹೇಂದ್ರ ಸಿಂಗ್ ಧೋನಿ ಹಾಗೂ ರೋಹಿತ್ ಶರ್ಮಾ ಈ ಪಂದ್ಯದ ವೇಳೆ ಹಾಜರಿದ್ದರು. ಇತ್ತ ಟೀಮ್ ಇಂಡಿಯಾ ಮೂರನೇ ಬಾರಿ ವಿಶ್ವಕಪ್ ಗೆದ್ದ ಬೆನ್ನಲ್ಲೇ ಮಹೇಂದ್ರ ಸಿಂಗ್ ಧೋನಿ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ಹಾಡಿ ಹೊಗಳಿದ್ದು ವಿಶೇಷ. ಟಿ20 ವಿಶ್ವಕಪ್ ಫೈನಲ್‌ನಲ್ಲಿ ನ್ಯೂಝಿಲೆಂಡ್ ತಂಡವನ್ನು 96 ರನ್‌ಗಳಿಂದ ಸೋಲಿಸಿ ಐತಿಹಾಸಿಕ ಜಯ ಸಾಧಿಸಿದ ನಂತರ, ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಸಾಮಾಜಿಕ ಜಾಲತಾಣದ ಮೂಲಕ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

"ಕೋಚ್ ಸಾಬ್, ನಿಮ್ಮ ನಗು ಅದ್ಭುತವಾಗಿ ಕಾಣುತ್ತಿದೆ. ಗಂಭೀರತೆಯೊಂದಿಗೆ ನಗು ಇರುವುದು ಒಂದು 'ಕಿಲ್ಲರ್ ಕಾಂಬಿನೇಶನ್'. ತುಂಬಾ ಚೆನ್ನಾಗಿ ಆಡಿದ್ದೀರಿ, ಆನಂದಿಸಿ ಗೆಳೆಯರೇ" ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ. ಸಾಮಾನ್ಯವಾಗಿ ಮೈದಾನದಲ್ಲಿ ಗಂಭೀರವಾಗಿ ಕಾಣಿಸಿಕೊಳ್ಳುವ ಗೌತಮ್ ಗಂಭೀರ್, ಭಾರತದ ಗೆಲುವಿನ ಸಂಭ್ರಮದಲ್ಲಿ ನಗುತ್ತಿರುವುದನ್ನು ಕಂಡು ಧೋನಿ ಈ ರೀತಿ ತಮಾಷೆಯಾಗಿ ಪ್ರತಿಕ್ರಿಯಿಸಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಕೆ

ಶಿರಾ : ಸುಮಾರು 35 ವರ್ಷಗಳಿಂದ ಪರಿಶಿಷ್ಟ ಜಾತಿಯಲ್ಲಿ ಇರುವ 101 ಕೋಮುಗಳಿಗೆ ಒಳಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಮಾದಿಗ ಸಮುದಾಯದಿಂದ ಹೋರಾಟ ನಡೆಯುತ್ತಲೇ ಇದೇ ಎಂದು ಸಿರಾ ಮಾದಿಗ ಮಹಾಸಭಾ ಅಧ್ಯಕ್ಷ ಪಿ.ಬಿ. ನರಸಿಂಹಯ್ಯತಿಳಿಸಿದರು, ಅವರು ನಗರದ ತಾಲ್ಲೂಕು ಕಚೇರಿಗೆ ತೆರಳಿ ತಾಲ್ಲೂಕು ದಂಡಾಧಿಕಾರಿಗಳು ಹಾಗೂ ತಹಸೀಲ್ದಾರ್ ಆನಂದ್ ಕುಮಾರ್ ರವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.


ಸುಪ್ರೀಂ ಕೋರ್ಟ್ 2024ನೇ ಸಾಲಿನ ಆ. 1ರಂದು ಸ್ಪಷ್ಟ ಆದೇಶ ನೀಡಿ ಆಂಯಾ ರಾಜ್ಯ ಸರ್ಕಾರಗಳೇ ಪರಿಶಿಷ್ಟ ಜಾತಿಯಲ್ಲಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ದತ್ತಾಂಶಗಳನ್ನು ಕ್ರೂಡೀಕರಣ ಮಾಡಿ ಅದರ ಆಧಾರದ ಮೇಲೆ ಒಳಮೀಸಲಾತಿ ಕಲ್ಪಿಸುವಂತೆ ತಿಳಿಸಿದೆ. ಇದರ ಸಂಬಂಧವಾಗಿ ಸರ್ಕಾರ ಜಸ್ಟೀಸ್ ನಾಗಮೋಹನ್‌ದಾಸ್ ರವರ ಆಯೋಗ ರಚನೆ ಮಾಡಿ ಅವರಿಂದ ಪಡೆದ ದತ್ತಾಂಶದ ವರದಿಯ ಆಧಾರದ ಮೇಲೆ ಮಾದಿಗ ಸಂಬಂಧಿತ ಜಾತಿಗಳಿಗೆ–06, ಹೊಲೆಯ ಸಂಬಂಧಿತ ಜಾತಿಗಳಿಗೆ–06 ಮತ್ತು ಸ್ಪರ್ಶ ಜಾತಿಗಳೊಂದಿಗೆ ಅಲೆಮಾರಿ ಜನಾಂಗಗಳನ್ನು ಸೇರಿಸಿ –05ರ



ಅನುಪಾ ತದಲ್ಲಿ ಒಳಮೀಸಲಾತಿ ಜಾರಿ ಮಾಡಲು ತೀರ್ಮಾನ ಮಾಡಿತ್ತು. ಆದರೆ ತದನಂತರ ಮೀಸಲಾತಿ ಪ್ರಮಾಣ ಶೇಕಡ 50 ಕ್ಕಿಂತ ಜಾಸ್ತಿಯಾಗದಂತೆ ಉದ್ಯೋಗ ನೇಮಕಾತಿ ಮಾಡಬೇಕೆಂದು ಸರ್ವೋ ಚ್ಚ ನ್ಯಾಯಾಲಯ ತೀರ್ಪು ನೀಡಿರುವುದರಿಂದ ಅದರಂತೆಯೇ ಶೇ. 50 ರಡಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇಕಡ 15 ರ ಮೀಸಲಾತಿಯಲ್ಲಿಯೇ ಒಳಮೀಸಲಾತಿ ಕಲ್ಪಿಸುವಂತೆ ಮಾದಿಗ ಸಮು ದಾಯ ಸರ್ಕಾರವನ್ನು ಆಗ್ರಹಿಸುತ್ತಿದೆ. ಆದರೆ 2026 ಫೆ. 27ರಂದು ಸರ್ಕಾರ ಒಳಮೀಸಲಾತಿ ಜಾರಿಯನ್ನು ಕೈಬಿಟ್ಟು 56432 ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿರುವುದರಿಂದ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗುತ್ತಿದೆ. ಅದರಲ್ಲೂ ಮಾದಿಗ ಸಮುದಾಯಕ್ಕೆ ತೀವ್ರತರವಾದ ಅನ್ಯಾಯವಾಗುತ್ತಿದೆ. ಆದ್ದರಿಂ ದ ಸರ್ಕಾರದ ಈ ಅನ್ಯಾಯವನ್ನು ಸರಿಪಡಿಸಿ 56432 ಹುದ್ದೆ ಗಳ ನೇಮಕಾತಿಯಲ್ಲಿ ಒಳಮೀಸಲಾತಿ ಜಾರಿಮಾಡಿ ನ್ಯಾಯ ಒದಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಶಿರಾ ತಾಲ್ಲೂಕಿನ ದಂಡಾಧಿ ಕಾರಿಗಳು ಹಾಗೂ ತಹಸೀಲ್ದಾರ್ ಮುಖೇನ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೆ ಸಿರಾ ತಾಲ್ಲೂಕು ಮಾದಿಗ ಮಹಾಸಭಾವತಿಯಿಂದ ಮನವಿ ಸಲ್ಲಿಸಲಾಗಿದೆ ಎಂದರು.

ತಾಲ್ಲೂಕು ಮಾದಿಗ ಮಹಾಸಭಾ ಕಾರ್ಯದರ್ಶಿ ನರಸಿಂಹಮೂರ್ತಿ, ಡಾ. ಲಕ್ಷ್ಮಣ್ ದ್ವಾರನಕುಂಟೆ, ಶಾಸಮರು ಮೂರ್ತಿ, ಜಾಯರಾಮ್ ಕೃಷ್ಣ, ಕೆಪಿಸಿಸಿ ಸದಸ್ಯ ಟಿ. ಲೋಕೇಶ್, ಹನುಮಂತರಾಯಪ್ಪ ಬೀರನಹಳ್ಳಿ, ಮೂರ್ತಿ ಕೆರೆಯಾಗಲಹಳ್ಳಿ, ಹನುಮಂತರಾಯಪ್ಪ, ಶಿವಣ್ಣ, ಚಂದ್ರಶೇಖರ್ ಸೇರಿದಂತೆ ಮಹಾಸಭದ ಪದಾಧಿಕಾರಿಗಳು ಹಗೂ ಪ್ರಮುಖರು ಉಪಸ್ಥಿತರಿದ್ದರು.

ಕ್ಷೇತ್ರ ಧರ್ಮಸ್ಥಳದಿಂದ ಸಹಾಯಧನದ ಡಿಡಿ ವಿತರಣೆ.



ಕ್ಷೇತ್ರ ಧರ್ಮಸ್ಥಳದಿಂದ ಸಹಾಯಧನದ ಡಿಡಿ ವಿತರಣೆ.

ಚಿಕ್ಕನಾಯಕನಹಳ್ಳಿ : ತಾಲೂಕಿನ ಶೆಟ್ಟಿಕೆರೆ ಹೋಬಳಿಯ ಮಾದಿಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ದೇವಾಲಯದ ನಿರ್ಮಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರುಗೊಂಡ150000/– ಮೊತ್ತದ ಡಿಡಿ ಯನ್ನು ವಿತರಣೆ ಮಾಡಲಾಯಿತು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ನಂದೀಶ ಕುಮಾರ, ಉಪಾಧ್ಯಕ್ಷರಾದ ರಂಗನಾಥ ಸ್ವಾಮಿ, ಶಾಲಾ ಮುಖ್ಯ ಗುರುಗಳಾದ ಮಲ್ಲಿಕಾರ್ಜುನಯ್ಯ, ಸೇವಾಪ್ರತಿನಿಧಿ ಜಯಂತಿ, ಸಮಿತಿ ಸದಸ್ಯರುಗಳಾದ ವಿನಯ್, ಅಭಿಷೇಕ್, ಗಂಗಾಧರಯ್ಯ, ಸ್ವ ಸಹಾಯ ಸಂಘಗಳ ಸದಸ್ಯರುಗಳು ಉಪಸ್ಥಿತರಿದ್ದರು.

ಮಹಿಳೆಯಲ್ಲಿರುವ ಧ್ವನಿಗೆ ಅಪಾರವಾದ ಶಕ್ತಿಯಿದೆ ಧ್ವನಿಗೆ ಬೆಂಬಲಬೇಕು

ತುಮಕೂರು: ಮಹಿಳೆಗೆ ನೀಡುವ ಯಾವುದೇ ಕೊಡುಗೆ ಮತ್ತೆ ದ್ವಿಗುಣವಾಗಿ ಸಮಾಜಕ್ಕೆ ಮರು ಸಂದಾಯವಾಗುತ್ತದೆ. ಇಂತಹ ಗುಣ ಹೊಂದಿರುವ ಮಹಿಳೆಗೆ ಶಿಕ್ಷಣ, ಅಧಿಕಾರ ಮತ್ತು ಉನ್ನತ ಸ್ಥಾನ–ಮಾನ ನೀಡುವುದು ಅಗತ್ಯವಾಗಿದೆ ಎಂದು ಕರ್ನಾಟಕ ಮಹಿಳಾ ಉದ್ಯಮಿಗಳ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸಿ ಭುವನೇಶ್ವರಿ ಅವರು ಅಭಿಪ್ರಾಯಪಟ್ಟರು.

ನಗರ ದ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಾಹೇ ವಿವಿ, ಕಾಲೇಜಿನ ಐಕ್ಯೂಎಸಿ ವಿಭಾಗದ ಮಹಿಳಾ ಸಂವರ್ದನಾ ಸಮಿತಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಮಹಿಳೆಯಲ್ಲಿರುವ ದ್ವನಿಗೆ ಅಪಾರವಾದ ಶಕ್ತಿಯಿದೆ. ಅ ಧ್ವನಿಗೆ ಹೆಚ್ಚು ಬೆಂಬಲ ಸಿಕ್ಕಾಗ ಸಮಾಜದ ಅಭಿವೃದ್ದಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ನಾವೆಲ್ಲರೂ ಮಹಿಳೆಯರಿಗೆ ಗೌರವ ನೀಡಬೇಕು.



ಬರಿ ಘೋಷಣೆ–ಚಳುವಳಿಗೆ ಸೀಮಿತವಾಗದೆ. ಮಹಿಳೆಯರಿಗೆ ಆದ್ಯತೆ ಮತ್ತು ಅವಕಾಶ ನೀಡಿ ಎಂದು ಸಿ ಭುವನೇಶ್ವರಿ ಅವರು ಕರೆ ನೀಡಿದರು. ಸಾಹೇ ಉಪಕುಲಪತಿಗಳಾದ ಡಾ.ಕೆ.ಬಿ.ಲಿಂಗೇಗೌಡ ಮಾತ ನಾಡಿ, ಸಮಾಜದಲ್ಲಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆ ಕೆಲಸ ಮಾಡುವುದನ್ನು ನಾವಿಂದು ಕಾಣುತ್ತಿದ್ದೇವೆ. ಇನ್ನಷ್ಟು ಆರ್ಥಿಕ ಸಬಲೀಕರಣಕ್ಕೆ ಆದ್ಯತೆ ನೀಡುವುದಕ್ಕೆ ನಾವೆಲ್ಲರೂ ಮುಂದಾಗೋಣ ಎಂದರು.

ಸಾಹೇ ವಿವಿ ಪರೀಕ್ಷಾಂಗ ನಿಯಂತ್ರಕರಾದ ಡಾ.ಜಿ.ಗುರುಶಂಕರ್ ಅವರು ಮಾತನಾಡಿ, ಶೇಕಡ 60ರಷ್ಟು ಮಹಿಳೆ ಸಮುದಾಯ ಇಂದು ಉದ್ಯೋಗ ಕ್ಷೇತ್ರದಲ್ಲಿ ನಿರತರಾಗಿರುವುದನ್ನು ನೋಡ ಬಹುದು. ಮಹಿಳೆಯರ ಶಕ್ತಿ ಏನು ಎಂಬುದ ನ್ನು ಚುನಾವಣೆಯಲ್ಲಿ ಇತ್ತೀಚಿನ ದಿನದಲಿ ್ಲ ಗಮನಿಸಬಹುದು. ಮಹಿಳೆ ಪ್ರಧಾ ನಮಂತ್ರಿಯಾಗಿದ್ದು ಇಂದಿರಾಗಾಂಧಿ, ಸುಧಾ ಮೂರ್ತಿ ಸೇರಿದಂತೆ ಅನೇಕ ಮಹಿಳೆಯರು ಐತಿಹಾಸಿಕ'ವಾದ ಕೆಲಸಗಳನ್ನು ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಶ್ರೀ ಸಿದ್ಧಾರ್ಥ ಮಹಾ ತಾಂತ್ರಿಕ ವಿದ್ಯಾನಿಲಯದ ಪ್ರಾಂಶುಪಾಲರಾದ ಡಾ.ಮಹಾಂತೇಶ್.ಎಂ. ನಡಕಟ್ಟಿ ಅವರು ಮಾತನಾಡಿ, ಮಹಿಳೆ ಎಂದರೆ ಕೇವಲ ಶಕ್ತಿಯಲ್ಲ ಅವಳು ತ್ಯಾಗದ ಪ್ರತಿರೂಪ ಬಾಲ್ಯದಲ್ಲಿ ಮಗಳಾಗಿ, ವಿದ್ಯಾರ್ಥಿನಿಯಾಗಿ ನಂತರ ಸೊಸೆಯಾಗಿ, ಪತ್ನಿಯಾಗಿ, ತಾಯಿಯಾಗಿ ಅವಳು ನಿರಂತರ ಸೇವೆ ಸಲ್ಲಿಸುತ್ತಾಳೆ. ಬೆಳಗ್ಗೆಯಿಂದ ರಾತ್ರಿವರೆಗೆ ದುಡಿಯುವ ಅವಳ ಸೇವೆಗೆ ಬೆಲೆ ಕಟ್ಟಲಾಗುವುದಿಲ್ಲ. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವುದು ನಮ್ಮ ಮೊದಲನೇ ಆದ್ಯತೆಯಾಗಬೇಕು ಎಂದರು.

ಮಹಿಳೆ ಎದುರಿಸುತ್ತಿರುವ ದೌರ್ಜನ್ಯ, ಅಸಮಾನತೆಯ ವಿರುದ್ಧ ನಾವೆಲ್ಲರೂ ಒಟ್ಟಾಗಿ ಧ್ವನಿ ಎತ್ತೋಣ. ಮಹಿಳೆ ಹೊಸ ಭಾರತೀಯ ಸಮಾಜದ ಶಿಲ್ಪಿಗಳು. ನಿಮ್ಮ ಕನಸಿಗೆ ಮಿತಿ ಇಲ್ಲ. ನಿಮ್ಮ ಛಲಕ್ಕೆ ಅಡ್ಡಿ ಇಲ್ಲ. ಧೈರ್ಯದಿಂದ ಮುನ್ನುಗ್ಗಿ ಮುನ್ನಡೆಯಿರಿ ಎಂದು ಅವರು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಡೀನ್‌ಗಳಾದ ಡಾ. ಸುಮ.ಆರ್, ಡಾ. ದಿವ್ಯಪ್ರಭ, ಐಕ್ಯೂಎಸಿ ಸಂಯೆ ೋಜಕರಾದ ಡಾ.ರವಿರಾಮ್.ವಿ, ಪ್ರಾಧ್ಯಾಪಕರಾದ ಡಾ. ಅಶ್ವಿನಿ ಎಸ್. ಶಿವಣ್ಣವರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತಿಯಲ್ಲಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಗುರು ರೇವಣ್ಣಸಿದ್ದಯ್ಯ ಒಡೆಯರ್ ನಿಧನ



ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಶ್ರೀ ರೇವಣಸಿದ್ದೇಶ್ವರ ಮಠದ ಪೀಠಾಧ್ಯಕ್ಷರು ಹಾಗೂ ಉದ್ಯಮಿಗಳು, ಕುರುಬ ಸಮಾಜದ ಹಿರಿಯ ಮುಖಂಡರು ಆದ ಗುರು ರೇವಣ್ಣಸಿದ್ದಯ್ಯ ಒಡೆಯರ್ 72 ವರ್ಷ ನಗರದ ಶಿರಾಗೇಟ್ ನಲ್ಲಿರುವ ಅವರ ನಿವಾಸದಲ್ಲಿ ಲಿಂಗೈಕ್ಯರಾದರು.

ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಪತ್ನಿ ಪಂಕಜ ಹಾಗೂ 4ಜನ ಹೆಣ್ಣು ಮಕ್ಕಳು , ಅಳಿಯಂದಿರು, ಮೊಮ್ಮಕ್ಕಳನ್ನು, ಶಿಷ್ಯಂದಿರು, ಹಾಗೂ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.ಮೃತರು ಹಲವಾರುವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಉದ್ಯಮವನ್ನು ನಡೆಸುತ್ತಿದ್ದರು. ಸಾಂಸ್ಕೃತಿಕ, ಧಾರ್ಮಿಕ ಕಾರ್ಯಗಳಲ್ಲಿ ಹಾಗೂ ಸಮಾಜದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಸಾರ್ಥಕವಾದ ನಿಸ್ವಾರ್ಥ ಸೇವಾ ಕಾರ್ಯಗಳನ್ನು ಮಾಡಿದ್ದರು.ಅಂತ್ಯಕ್ರಿಯೆ ಇಂದು ಮಧ್ಯಾಹ್ನ 3 ಗಂಟೆ ನಡೆಯಿತು

ಲಿಂಗೈಕ್ಯರಾದ ಶ್ರೀ ರೇವಣ್ಣ ಸಿದ್ದಯ್ಯ ಒಡೆಯರ್ ರವರ ಅಂತ್ಯಕ್ರಿಯೆಯು ಅವರ ಹುಟ್ಟೂರಾದ ಶಿರಾ ಕಾಳಿದಾಸ ನಗರದಲ್ಲಿರುವ ಸಾರ್ವಜನಿಕ ಸ್ಮಶಾನದಲ್ಲಿ ಕುಲಗುರು ಶ್ರೀ ರೇವಣಸಿದ್ದೇಶ್ವರ ಗುರು ಪರಂಪರೆಯಂತೆ ಧಾರ್ಮಿಕ ವಿಧಿ ವಿಧಾನಗಳಲ್ಲಿ ನಡೆಸಲಾಯಿತು. ಎಂದು ಅವರ ಹಿರಿಯ ಸುಪುತ್ರಿ ಜಿಲ್ಲಾ ಮಹಿಳಾ ಬ್ಲಾಕ್ ಕಾಂಗ್ರೆಸ್ ಘಟಕದ ಅಧ್ಯಕ್ಷರಾದ ಶ್ರೀಮತಿ ಸವಿತಾ ಅವರು ತಿಳಿಸಿದ್ದಾರೆ.

ಉಮಾ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ತುಮಕೂರು: ಉಮಾ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ, ಕೆಂಪರಾಜು ಕೊಡಿಯಾಲ ರವರು ಮಹಿಳೆಯರ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ,ರಾಜಕೀಯ ಸಾಧನೆಗಳನ್ನು ಗುರುತಿಸಿ ಗೌರವಿಸುವ ಮತ್ತು ಲಿಂಗ ಸಮಾನತೆಯ ಜಾಗೃತಿಗಾಗಿ ಹಾಗೂ ಮಹಿಳಾ ಸಬಲೀಕರಣದ ಹಕ್ಕುಗಳ ಪ್ರತಿಪಾದನೆಗಾಗಿ ಈ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಬೇಕು, ನಮ್ಮ ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಪ್ರಧಾನವಾದದ್ದು, ಮಹಿಳೆಯು ಅಬಲೆಯಲ್ಲ ಸಬಲತೆ ಹೊಂದಿರುವ ವ್ಯಕ್ತಿ, ಎಂದು ಇತ್ತೀಚಿನ ದಿನಗಳಲ್ಲಿ ಹೇಳಬಹುದು ಯಾಕೆಂದರೆ ರಾಜಕೀಯ ಕ್ಷೇತ್ರದಲ್ಲಿ ಇಂದು ಇಂದಿರಾಗಾಂಧಿ ಮಮತ ಬ್ಯಾನರ್ಜಿ, ಅಕ್ಕ ಮಾಯಾವತಿ, ದ್ರೌಪದಿ ಮುರ್ಮು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಕಲ್ಪನಾ ಚಾವ್ಲಾ ಅವರನ್ನು ನೋಡಬಹುದು, ಕ್ರೀಡಾ ಕ್ಷೇತ್ರದಲ್ಲಿ, ಪಿ.ವಿ ಸಿಂಧು, ಮೇರಿ ಕೊಮ್ ,ಇವರನ್ನು ನೋಡಬಹುದು. ಉದ್ಯಮ ಮತ್ತು ಅಧಿಕಾರ ಗಳಲ್ಲಿ ಸಾವಿರಾರು/ಲಕ್ಷಾಂತರ ಮಹಿಳೆಯರು ದೇಶಕ್ಕೆ ಹೆಮ್ಮೆ ತರುವಂತ ಸಾಧನೆಗಳನ್ನು ಮಾಡಿದ್ದಾರೆ, ಶಿಕ್ಷಣವೆಂಬ ಸಾಧನದಿಂದ ಹೆಚ್ಚು ಹೆಚ್ಚು ಸಾಧನೆ ಮಾಡುತ್ತಾ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದಾರೆ. 2026ನೇ ವರ್ಷದ ಮಹಿಳಾ ದಿನದ ಘನ ಘೋಷ ವಾಕ್ಯ ಏನೆಂದರೆ



"ಮಹಿಳೆಯರ ಶಕ್ತಿಯೇ ಸಮಾಜದ ಅಭಿವೃದ್ಧಿ" ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಕಾಲೇಜಿನ ಮಹಿಳಾ ಸಬಲೀಕರಣದ ಸಂಚಾಲಕರಾದ ತನುಜ ರವರು ನಡೆಸಿಕೊಟ್ಟರು, ಇವರು ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರ ಸಬಲೀಕರಣದ ಬಗ್ಗೆ, ಮಹಿಳೆಯು ತಾನು ಯಾವ ಯಾವ ವಯಸ್ಸಿನಲ್ಲಿ ಯಾವ ಯಾವ ಕೆಲಸಗಳನ್ನು ಪೂರೈಸಬೇಕು ಮತ್ತು ಒಂದು ಮಗು ಒಂದು ವರ್ಷದ ವಯಸ್ಸಿನಲ್ಲಿ ತೊದಲು ನುಡಿಯಾಡಿದರೆ ಅದು ಆ ವಯಸ್ಸಿನ ಸಹಜತೆ ಆದರೆ ಅದೇ ಮಗು 10 ವರ್ಷದಲ್ಲಿ ತೊದಲು ನುಡಿಯಾಡಿದರೆ ಅಲ್ಲಿ ಏನೋ ಒಂದು ಸಮಸ್ಯೆ ಇದೆ ಎಂದು ತಿಳಿಯಬೇಕಾಗುತ್ತದೆ ಎಂದು ತಿಳಿಸಿದ್ದರು.

ಮತ್ತು ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ, ಶೇಖರ್ ರವರು ಅರುಣಿಮಾ ಸಿನ್ಹಾ ಅವರ ಕಥೆಯು ಅಪ್ರತಿಮ ಛಲ ಮತ್ತು ಧೈರ್ಯದ ಸಂಕೇತವಾಗಿದೆ. ರಾಷ್ಟ್ರೀಯ ಮಟ್ಟದ ವಾಲಿಬಾಲ್ ಆಟಗಾರ್ತಿಯಾಗಿದ್ದ ಇವರು , ರೈಲಿನಿಂದ ದರೋಡೆಕೋರರು ತಳ್ಳಿದ ಕಾರಣ ಒಂದು ಕಾಲನ್ನು ಕಳೆದುಕೊಂಡರೂ, ಕೃತಕ ಕಾಲಿನ ಸಹಾಯದಿಂದ ಜಗತ್ತಿನ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್ ಏರಿದ ವಿಶ್ವದ ಮೊದಲ ಅಂಗವಿಕಲ ಮಹಿಳೆಯಾದರು. ಇವರ ಸಾಧನೆಯು ಎಲ್ಲಾ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾಗಬೇಕೆಂದು ತಿಳಿಸಿದರು, ಕಾರ್ಯಕ್ರಮದಲ್ಲಿ ಇತಿಹಾಸ ಪ್ರಾಧ್ಯಾಪಕರಾದ ಡಾ, ಹರ್ಷ ರವರು ಮಹಿಳೆಯರು ಇಲ್ಲಿಯವರೆಗೂ ಸಾಧಿಸಿದ ಸಾಧನೆಯನ್ನು ಸ್ಮರಿಸಿದರು, ಫಿಸಿಕಲ್ ಡೈರೆಕ್ಟರ್ ಡಾ, ಪಾಂಡಿಯನ್ ಮತ್ತು ಬೋಧಕೇತರ ವೃಂದದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು, ಕಾರ್ಯಕ್ರಮದ ನಿರೂಪಣೆಯನ್ನು ಶ್ರುತಿ. ಖ ಮತ್ತು, ಸ್ವಾಗತವನ್ನು ಬಿಂದು ವಿದ್ಯಾರ್ಥಿನಿಯರು ನಡೆಸಿಕೊಟ್ಟರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

" ರಾಷ್ಟ್ರೀಯ ಭಾವೈಕ್ಯತಾ ಶಿಬಿರ'

ಮಧುಗಿರಿ ...ಬೆಳಗಾವಿಯ ಕೆಎಲ್‌ಇ ಅಕಾಡೆಮಿ ಆಫ್ ಎಜುಕೇಶನ್ ರಿಸರ್ಚ್ ನಲ್ಲಿ, ಕರ್ನಾಟಕ ಸರ್ಕಾರ'ದ ಎನ್‌ಎಸ್‌ಎಸ್ ಸೆಲ್ ಮತ್ತು ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶ 'ನಾಲಯ ಬೆಂಗಳೂರು ಜಂಟಿಯಾಗಿ" ರಾಷ್ಟ್ರೀಯ ಭಾವೈಕ್ಯತಾ ಶಿಬಿರ'ವ 'ನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಮಿಡಿಗೇಶಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಮಂಜು ಭಾರ್ಗವಿ ತಿಳಿಸಿದ್ದಾರೆ.. ಈ ಕಾರ್ಯಕ್ರಮವನ್ನು "ರಾಷ್ಟ್ರೀಯ ಏಕತೆಗಾಗಿ ಯುವ" ಯೋಗಕ್ಷೇಮ" ಎಂಬ ಧ್ಯೇಯದಡಿಯಲ್ಲಿ ಕೆ.ಎಲ್.ಇ.ಅಕಾಡೆಮಿ ಬೆಳಗಾವಿ ನಿರ್ದೇಶಕರಾದ ಡಾ. ವಿ.ಡಿ. ಪಾಟೀಲ್ ಮತ್ತು ಕೆ.ಎಲ್ ಇ ಅಕಾಡೆಮಿಯ ಕುಲಸಚಿವರಾದ ಡಾ. ವಿ.ಎಂ. ಪಟ್ಟನ್ ಶೆಟ್ಟಿ ಮತ್ತು ಉದ್ಘಾಟಿಸಿದರು ಈ ಶಿಬಿರದಲ್ಲಿ.

ಎನ್‌ಎಸ್‌ಎಸ್ ಕೋಶ ತುಮಕೂರು ವಿಶ್ವವಿದ್ಯಾಲಯದಿಂದ 6 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು ರಾಷ್ಟ್ರೀಯ ಸೇವಾ ಯೋಜನೆಯ , ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಎನ್‌ಎಸ್‌ಎಸ್‌ಸ್ವಯಂಸೇವಕರು ತಮ್ಮ ವ್ಯಕ್ತಿತ್ವ, ಜವಾಬ್ದಾರಿ, ಜೀವನದಲ್ಲಿ ತಮ್ಮ ಗುರಿಯತ್ತ ಸಾಗುವ ಮತ್ತು ಬದ್ಧತೆಯನ್ನು ತೋರಿಸುವ ಹಾಗೂ ದೇಶಭಕ್ತಿಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಈ ರಾಷ್ಟ್ರೀಯ ಶಿಬಿರದಲ್ಲಿ ಕರ್ನಾಟಕ ಸರ್ಕಾರದ ಎನ್.ಎಸ್.ಎಸ್ ಪ್ರಾದೇಶಿಕ ನಿರ್ದೇಶಕ ಶ್ರೀ ಗಿರಿಧರ್ ಉಪಾಧ್ಯಾಯ ಮತ್ತು ಕರ್ನಾಟಕ ಸರ್ಕಾರದ ಯುವ ಅಧಿಕಾರಿ ಶ್ರೀ ಸಂತೋಷ್ ಅವರೊಂದಿಗೆ ಎನ್ ಎಸ್ ಎಸ್ ಶಿಬಿರಾರ್ಥಿಗಳು ಸಂವಹನ ನಡೆಸುವ ಅವಕಾಶವನ್ನು ಪಡೆದರು. ಕ್ಷೇತ್ರಭೇಟಿಯ ಭಾಗವಾಗಿ ಶಿಬಿರಾರ್ಥಿಗಳು ಅಗ್ನಿವೀರ್ ಆರ್ಮಿ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆದುಕೊಂಡರು ಮಾತ್ರವಲ್ಲ ಬೆಳಗಾವಿಯ ಖಾನಪುರ ತಾ.ಹಳಸಿಯಲ್ಲಿ ಹೆಸರಾಂತ ರಾಮತೀರ್ಥ ಕ್ಷೇತ್ರಕ್ಕೆ ಭೇಟಿ ನೀಡಿ ಸ್ವಚ್ಚತಾ ಕಾರ್ಯವನ್ನು ಮಾಡಲಾಯಿತು..



ನಮ್ಮ ಶಿಬಿರಾರ್ಥಿಗಳು ಹಿಮಾಚಲ ಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ ಮುಂತಾದ ರಾಜ್ಯಗಳ ರಾಷ್ಟ್ರೀಯ ಸ್ವಯಂಸೇವಕರೊಂದಿಗೆ ಸಂವಹನ ನಡೆಸಿ ತಮ್ಮ ಜ್ಞಾನ, ಸಂಪ್ರದಾಯ, ಸಂಸ್ಕೃತಿ ಮತ್ತು ಅನುಭವಗಳನ್ನು ವಿನಿಮಯ ಮಾಡಿಕೊಂಡರು.ಈ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಿಡಿಗೇಶಿಯ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ ಡಾ. ಎಲ್ ಮಂಜು ಭಾರ್ಗವಿಯವರು ಭಾಗವಹಿಸಿದ್ದರು.ಹಾಗೂ\ ವಿದ್ಯಾರ್ಥಿ ಗಳನ್ನು ರಾಷ್ಟ್ರೀಯ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ, ಚಿತ್ರಕಲಾ ಸ್ಪರ್ಧೆ, ರಸಪ್ರಶ್ನೆ ಇತ್ಯಾದಿಗಳಲ್ಲಿ ಭಾಗವ ಹಿಸಲು ಪ್ರೇರೇಪಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಕೆ.ಸಿ.ಬಸವರಾಜು ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜನಾಧಿಕಾರಿಗಳಾದ ಡಾ.ನಾಗಭೂಷಣ್ ಬಗ್ಗನಾಡುರವರು ವಿದ್ಯಾರ್ಥಿಗಳ ಬಗ್ಗೆ ಸದಭಿಪ್ರಾಯವನ್ನು ವ್ಯಕ್ತಪಡಿಸಿದರು.ಈ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಭಾಗವಹಿಸಿದ ತುಮಕೂರು ವಿಶ್ವವಿದ್ಯಾನಿಲಯದ

ಶಿಬಿರಾರ್ಥಿಗಳೆಂದರೆ 1. ಜಿಎಫ್‌ಜಿಸಿ ಮಧುಗಿರಿಯ ಶರತ್ .,2. ಜಿಎಫ್‌ಜಿಸಿ ಕೊರಟಗೆರೆಯ ರಂಗನಾಥ ಜಿಎಫ್‌ಜಿಸಿ ತಿಪಟೂರಿನ ಉಲ್ಲಾಸ್ ಮತ್ತು ವೀರೇಶ್, ತುಮಕೂರಿನ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ತುಂಗಶ್ರೀ ಮತ್ತು ಚಂಪಾ, ಮತ್ತು ಮಿಡಿಗೇಶಿ ಜಿ.ಎಫ್ ಜಿ.ಸಿ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಎಲ್ ಮಂಜು ಭಾರ್ಗವಿಯವರು ರಾಷ್ಟ್ರೀಯ ಎನ್ ಎಸ್ ಎಸ್ ಶಿಬಿರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.......

ರಾಮನಗರ ಸುದ್ದಿ ಕಾರ್ನರ್

ಹಲವು ಜಿಲ್ಲೆಯ ಪೊಲೀಸರ ನಿದ್ದೆಗೆಡಿಸಿದ್ದ ಅಂತಾರಾಜ್ಯ ಬೈಕ್ ಕಳ್ಳರ ಬಂಧನ



ರಾಮನಗರ ಪೊಲೀಸರು ರಾಜ್ಯದಾದ್ಯಂತ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರು ಅಂತಾರಾ ಜ್ಯ ಖತರ್ನಾಕ್ ಕಳ್ಳರನ್ನು ಬಂಧಿಸಿದ್ದಾರೆ. ಸದ್ಯ 50 ಲಕ್ಷ ರೂ. ಮೌಲ್ಯದ 10 ಬೈಕ್, 3 ಕಾರು ಸೇರಿ ಹಲವು ವಾಹನಗಳು ಹಾಗೂ 4 ಲಕ್ಷ ರೂ ನಗದು ವಶಪ ಡಿಸಿಕೊಳ್ಳಲಾಗಿದ್ದು, ಜೊತೆಗೆ 13 ಪ್ರಕರಣಗಳನ್ನು ಪೊಲೀಸರು ಭೇದಿಸಿದ್ದಾರೆ.

ರಾಮನಗರ, : ಅವರಿಬ್ಬರು ಖತರ್ನಾಕ್ ಕಳ್ಳರು. ಹಲವು ಜಿಲ್ಲೆಯ ಪೊಲೀಸರ ನಿದ್ದೆಗೆ ಡಿಸಿದ್ದರು. ಸಿಕ್ಕಸಿಕ್ಕ ಕಡೆಗಳಲ್ಲಿ ವಾಹನಗಳ ಕಳ್ಳತನ ಮಾಡುವುದೇ ಇವರ ಕಾಯಕ. ಹೀಗೆ ಕದ್ದ ವಾಹನಗಳ ನಂಬರ್ ಪ್ಲೇಟ್ ಬದಲಾಯಿಸಿ, ಇಂಜನ್ ಹಾಗೂ ಚಾರ್ಸಿ ನಂಬರ್ ನಕಲು ಮಾಡಿ ಕಡಿಮೆ ಬೆಲೆಗೆ ವಾಹನಗಳನ್ನ ಮಾರಾಟ ಮಾಡುತ್ತಿದ್ದರು. ಆದರೆ ಕೊನೆಗೂ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ ಇದೀಗ ಜೈಲಿಗಟ್ಟಿದ್ದಾರೆ.

ಬೈಕ್, ವಾಹನ ಸೇರಿದಂತೆ ಲಕ್ಷಾಂತರ ರೂ ಹಣ ವಶಕ್ಕೆ

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಇಬ್ಬರು ಅಂತಾರಾಜ್ಯ ಕಳ್ಳರನ್ನ ಬಂಧಿಸಿದ್ದಾರೆ. ಅಂದಹಾಗೆ ಶಿವಮೊಗ್ಗ ಮೂಲದ ಶಾಹಿದ್ ಅಹಮ ದ್ (27) ಹಾಗೂ ತುಮಕೂರು ಮೂಲದ ಅಪ್ಸರ್ ಅಹಮದ್ (40) ಬಂಧಿತ ಆರೋಪಿಗಳು. ಇವರಿಬ್ಬರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಹನ ಕಳ್ಳತನ ಮಾಡಿದ್ದಾರೆ. ಸದ್ಯ ಬಂಧಿತ ಆರೋಪಿಗಳಿಂದ 50 ಲಕ್ಷ ರೂ ಮೌಲ್ಯದ 2 ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನ, 3 ಕಾರುಗಳು, 10 ದ್ವಿಚಕ್ರ ವಾಹನಗಳು ಹಾಗೂ 4 ಲಕ್ಷ ರೂ ನಗದು ವಶಕ್ಕೆ ಪಡೆದುಕೊಂಡಿದ್ದು, 13 ಪ್ರಕರಣಗಳನ್ನು ಭೇದಿಸಿದ್ದಾರೆ. ಈ ಖದೀಮರು ರಾಮನಗರ, ಮಂಡ್ಯ, ಬೆಂಗಳೂರು, ತುಮಕೂರು, ಕೋಲಾರ, ಬಳ್ಳಾರಿ ಹಾಗೂ ಹುಬ್ಬಳ್ಳಿ ನಗರಗಳಲ್ಲೂ ತಮ್ಮ ಕೈಚಳಕ ತೋರಿಸಿದ್ದಾರೆ.

ಆರೋಪಿ ಶಾಹಿದ್ ವಾಹನ ಕಳ್ಳತನ ಮಾಡಿ ಅಪ್ಸರ್‌ಗೆ ಮಾರಾಟ ಮಾಡುತ್ತಿದ್ದ. ಕೆಲವು ವಾಹನಗಳನ್ನು ಗುಜರಿಗೆ ಹಾಕಿ ಮಾರಾಟ ಮಾಡುತ್ತಿದ್ದರೆ, ಇನ್ನೂ ಕೆಲವು ವಾಹನಗಳ ಇಂಜಿನ್ ಹಾಗೂ ಚಾರ್ಸಿ ನಂಬರ್ ಬದಲಾಯಿಸಿ, ನಕಲಿ ನಂಬರ್ ಪ್ಲೇಟ್ ಅಳವಡಿಸಿ ಮಾರಾಟ ಮಾಡುತ್ತಿದ್ದರು.

ಒಂದೇ ಕಡೆ ಕಳ್ಳತನ ಮಾಡಿದರೆ ಗೊತ್ತಾಗುತ್ತದೆ ಎಂದು ಹಲವು ಜಿಲ್ಲೆಗಳಿಗೆ ಹೋಗಿ ಲಾಡ್ಜ್‌ಗಳಲ್ಲಿ ತಂಗಿ ವಾಹನಗಳನ್ನ ಕಳ್ಳತನ ಮಾಡುತ್ತಿದ್ದರು. ಇನ್ನು ಹೈಟೆಕ್ ತಂತ್ರಜ್ಞಾನವನ್ನ ಬಳಸಿ ಕಾರುಗಳ ಲಾಕ್ ಓಪನ್ ಮಾಡಿ ಕಳ್ಳತನ ಮಾಡುತ್ತಿದ್ದರು. ಹೀಗಾಗಿ ಇವರ ವಿರುದ್ಧ ಈ ಹಿಂದೆಯೂ ಹಲವು ಪ್ರಕರಣಗಳು ದಾಖಲಾಗಿದ್ದವು. ಮತ್ತೊಂಡೆದೆ ರಾಮನಗರ ಐಜೂರು ಠಾಣೆ ಪೊಲೀಸರು ಡ್ರಗ್ಸ್ ಪ್ರಕರಣದಲ್ಲಿ ಈಗಾಗಲೇ ಮೂವರು ಆರೋಪಿಗಳನ್ನ ಬಂಧಿಸಿ ಒಂದುವರೆ ಕೋಟಿ ರೂ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದಿದ್ದರು. ಇದೀಗ ಪ್ರಕರಣಕ್ಕೆ ಬಳಸಿಕೊಂಡಿದ್ದ ಒಂದು ಕಾರು ಹಾಗೂ ಬೈಕ್ ಅನ್ನ ವಶಕ್ಕೆ ಪಡೆದಿದ್ದಾರೆ. ಒಟ್ಟಾರೆ ಹಲವು ಜಿಲ್ಲೆಗಳಲ್ಲಿ ವಾಹನಗಳನ್ನೇ ಟಾರ್ಗೆಟ್ ಮಾಡಿ ಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನ ಬಂಧಿಸುವಲ್ಲಿ ಪೊಲೀಸರ ಯಶಸ್ವಿಯಾಗಿ ತನಿಖೆ ಮುಂದುವರೆಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಸಂಸ್ಥೆಯೊಂದನ್ನ ನಾಲ್ಕು ಗಂಟೆಗಳ ಕಾಲ ಮಹಿಳೆಯರೇ ನಿರ್ವಹಿಸಿ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ದಾಖಲೆ



ರಾಮನ'ಗರ: ಅಂತರಾಷ್ಟ್ರಿಯ ಮಹಿಳಾ ದಿನಾಚರ'ಣೆಯ ಅಂಗವಾಗಿ ಬಿಡದಿಯ ವೆಲ್ಸ್ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಸಂಸ್ಥೆಯನ್ನು ಸತತ ನಾಲ್ಕು ಗಂಟೆಗಳ ಕಾಲ ಮಹಿಳೆಯರೇ ಮುನ್ನಡೆಸುವ ಮೂಲಕ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ದಾಖಲೆಯನ್ನು ಬರೆದಿದ್ದಾರೆ.

ತಾಲ್ಲೂಕಿನ ಬಿಡದಿಯ ವೆಲ್ಸ್ ಜಾಲಿವುಡ್ ಸ್ಟುಡಿಂ ಯೋಸ್ ಅಂಡ್ ಅಡ್ವೆಂಚರ್ಸ್ ಸಂಸ್ಥೆ ಮಹಿಳಾ ಸಬಲೀಕರಣವನ್ನು ಪ್ರತಿಬಿಂ ಬಿಸುವ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ವಿಶೇಷ ಪ್ರಯತ್ನದ ಭಾಗವಾಗಿ ಉದ್ಯಾನವನದ ಸಂಪೂರ್ಣ ಕಾರ್ಯಾಚರಣೆಗಳನ್ನು ನಾಲ್ಕು ಗಂಟೆಗಳ ಕಾಲ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದ್ದಾರೆ. ರೈಡ್ ಕಾರ್ಯಾಚರಣೆ, ಅತಿಥಿ ಸೇವೆ, ತಾಂತ್ರಿಕ ಸಹಾಯ, ಆಡಳಿತ ಮತ್ತು ಸುರಕ್ಷತಾ ವ್ಯವಸ್ಥೆ ಸೇರಿದಂತೆ ಎಲ್ಲಾ ವಿಭಾಗಗಳನ್ನು ಮಹಿಳೆಯರು ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಹೊಸ ಮೈಲಿಗಲ್ಲು ನಿರ್ಮಿಸಿದ್ದಾರೆ.

ವೆಲ್ಸ್ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಸಂಸ್ಥೆಯ ಆವರಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಿಡದಿ ಪುರಸಭೆ ಮುಖ್ಯಾಧಿಕಾರಿ ಎಂ.ಮೀನಾಕ್ಷಿರವರು ಮಾತ ನಾಡಿ, ವಿದ್ಯೆಗೆ ಸರಸ್ವತಿ, ಸಂಪತ್ತಿಗೆ ಲಕ್ಷ್ಮಿ, ಶಕ್ತಿಗೆ ಪಾರ್ವತಿ ಎಲ್ಲಕ್ಕೂ ಮಿಗಿಲಾಗಿ ಜನ್ಮಕೊಟ್ಟವಳು ಹೆಣ್ಣು, ಇಂತಹ ಸೃಷ್ಠಿಯ ಅದ್ಭುತಗಳೊಂದಿಗೆ ಕರ್ನಾಟಕ ಬುಕ್ ಆಫ್ ರೆಕಾರ್ಡ್ ದಾಖಲಿಸಿರುವ ಶ್ರಮಿಕ ಮಹಿಳಾ ಸಹೋದರಿಯರಿಗೆ ಕೃತಜ್ಞತೆ ಅರ್ಪಿಸುವುದಾಗಿ ತಿಳಿಸಿದರು.ಸ್ವಾವಲಂಬನೆಗೆ ಶುಭ ಹಾರೈಕೆ: " ಪ್ರತಿ ಜೀವವೂ ಹೆಣ್ಣಿನಿಂದಲೇ ಹುಟ್ಟಿದ್ದು, ಸಮಾಜವನ್ನು ಪ್ರೀತಿಯಿಂದ ಮುನ್ನಡೆಸುವ ತಾಯಿ, ಸಹೋದರಿ, ಮಗಳು ಮತ್ತು ಪತ್ನಿಯಾಗಿ ಕುಟುಂಬಕ್ಕೆ ಮತ್ತು ಸಮಾಜಕ್ಕೆ ತ್ಯಾಗಮಯಿಯಾಗಿದ್ದಾಳೆ. ಸಮಾನತೆ, ಗೌರವ ಮತ್ತು ಅವಕಾಶಗಳು ಪ್ರತಿ ಮಹಿಳೆಯ ಹಕ್ಕು ಗಳನ್ನು ಎತ್ತಿಹಿಡಿಯುವ ದಿನವಿದು. ನಿಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವ ಶಕ್ತಿ, ಆತ್ಮವಿಶ್ವಾಸ ಮತ್ತು ಧೈರ್ಯ ನಿರಂತ ರವಾಗಿರಲಿ. ನೀವು ಯಾವುದಕ್ಕೂ ಕಡಿಮೆ ಇಲ್ಲ, ನೀವೆಲ್ಲರೂ ಅದ್ಭುತ ಎಂದು ಮೀನಾಕ್ಷಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಪಿಸಿಸಿ ವಕ್ತಾರಾದ ಕುಸುಮಾ ಹನುಮಂತರಾಯಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮನೆಯಲ್ಲೂ, ಹೊರಗೂ ದುಡಿಯುವ ನಿಮ್ಮ ಅಸಾಧಾರಣ ಶಕ್ತಿ ಮತ್ತು ತಾಳ್ಮೆ ನಮಗೆಲ್ಲರಿಗೂ ಸ್ಫೂರ್ತಿ. ಹೆಣ್ಣು ಕುಟುಂಬದ ಕಣ್ಣು, ಬದುಕಿನ ಆಧಾರ ಸ್ತಂಭ'ವಾಗಿರುವ ಎಲ್ಲಾ ಮಹಿಳೆಯರು ಸ್ಫೂರ್ತಿಯ ಧಾರೆಯಾಗಿದ್ದೀರಿ ಎಂದರು.

ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡುವ ಮೂಲಕ ತನ್ನ ಛಾಪು ಮೂಡಿಸಿದ್ದು ಸಮಾಜದ ಆಧಾರಸ್ತಂಬವಾಗಿ ನಿಂತಿದ್ದಾಳೆ. ಮಹಿಳೆ ಇಂದು ತನ್ನ ಕುಟುಂಬದ ಜವಾಬ್ದಾ ರಿಯ ಜತೆಗೆ ಸ್ವಾಸ್ಥ ಸಮಾಜ ನಿರ್ಮಾಣದಲ್ಲೂ ಸೈ ಎನಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಹಾಗಾಗಿ ಮಹಿಳೆ ಎಲ್ಲಾ ರಂಗದಲ್ಲೂ ಸಾಧನೆ ಮಾಡುತ್ತಿರುವ ಕಾರಣ ಇಂದು ಸಮಾಜದಲ್ಲಿ ಉನ್ನತ ಸ್ಥಾನ ಮಾನಗಳು ದೊರೆಯುತ್ತಿವೆ. ಮಹಿಳೆಯರ ಶಕ್ತಿ, ಸಾಮರ್ಥ್ಯಗಳು ಹಾಗೂ ಧೈರ್ಯ ಸಾಹಸಗಳನ್ನು ನೆನೆಯುವ ದಿನವೇ ಮಹಿಳಾ ದಿನಾಚರಣೆಯ ವಿಶೇಷ ಎಂದು ನುಡಿದರು.

ಈ ವೇಳೆ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್ ಅಧ್ಯಕ್ಷರಾದ ಮೀರ್ ಸಮೀಮ್ ರಾಝಾ ಅವರು ಸಾಧನೆಯನ್ನು ಅಧಿಕೃತವಾಗಿ ಘೋಷಿಸಿ ನಿರ್ವಹಣಾ ತಂಡ ಹಾಗೂ ಮಹಿಳಾ ಸಿಬ್ಬಂದಿಯನ್ನು ಅಭಿನಂದಿಸಿದರು. ಚಿತ್ರನಟಿ ದಿಯಾ ಪಾಲಕ್ಕಲ್ ಮಾತನಾಡಿದರು. ವೆಲ್ಸ್ ಜಾಲಿವುಡ್ ನಿರ್ದೇಶಕಿ ಕುಶ್ಮಿತಾ ಗಣೇಶ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಹಿಳೆ ಸಮಾಜದ ಶಕ್ತಿಯ ರೂಪ

ತುಮ ಕೂರು: ದಿಯಾ ಚಾರಿಟಬಲ್ ಟ್ರಸ್ಟ್ ಇಂಡಿಯಾ ವತಿಯಿಂದ ಉಪ್ಪಾರಹಳ್ಳಿಯಲ್ಲಿ ನಡೆಸುತ್ತಿರುವ ವೃದ್ಧಾಶ್ರಮದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಸುನಿತಾ ಇಮ್ಯಾನ್ಯುಯಲ್ ಜಯಕುಮಾರ್ ಮಾತನಾಡಿ, ಒಬ್ಬ ಪ ುರುಷನು ವಿದ್ಯಾವ ಂತರಾದರೆ ಒಬ್ಬ ವ್ಯಕ್ತಿ ವಿದ್ಯಾವಂತನಾಗುತ್ತಾನೆ. ಆದರೆ ಒಬ್ಬ ಮಹಿಳೆ ವಿದ್ಯಾವಂತರಾದರೆ ಸಂಪೂ ರ್ಣ ಕುಟುಂಬವೇ ವಿದ್ಯಾವ ಂತವಾಗುತ್ತದೆ ಎಂಬ ವ ಾತು ಬಹಳ ಅರ್ಥಪೂರ್ಣವಾಗಿದೆ. ಮಹಿಳೆ ಎಂದರೆ ಕೇವಲ ಒಂದು ವ್ಯಕ್ತಿಂ ುಲ್ಲ, ಅವಳು ತಾಯಿ, ಶಿಕ್ಷಕಿ, ಮಾರ್ಗದರ್ಶಕಿ ಮತ್ತು ಸಮಾಜದ ಶಕ್ತಿ.

ನಮ್ಮ ಸಮಾಜದಲ್ಲಿ ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಶಿಕ್ಷಣ, ವಿಜ್ಞಾನ, ರಾಜಕೀಯ, ಕ್ರೀಡೆ, ಕಲೆ ಮತ್ತು ಉದ್ಯಮ ಅವರು ಕೇವಲ ಮನೆತನವನ್ನು ಮಾತ್ರ ನಿರ್ವಹಿಸುವುದಲ್ಲ, ರಾಷ್ಟ್ರದ ಅಭಿವೃದ್ಧಿಗೂ ಮಹತ್ತರ ಪಾತ್ರ ವಹಿಸುತ್ತಿದ್ದಾರೆ ಎಂದರು.

ಸಮಾ ಜದಲ್ಲಿ ಹಲವೆಡೆ ಮಹಿಳೆಯರು ಅನ್ಯಾಯ, ಹಿಂಸೆ ಮತ್ತು ಅಸಮಾನತೆಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಮಹಿಳೆ ಯರಿಗೆ ಸಮಾನ ಹಕ್ಕು ಗಳು, ಗೌರವ ಮತ್ತು ಸುರಕ್ಷತೆ ನೀಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಮಹಿಳೆ ಯರು ದುರ್ಬಲರಲ್ಲ,

ಶಿಕ್ಷಣದಿಂದ ಉನ್ನತ ಉದ್ಯೋಗಗಳು ಲಭ್ಯ: ಗ್ರಾಮಾಂತರ ಶಾಸಕ ಬಿ ಸುರೇಶ್ ಗೌಡ

ತುಮಕೂರು : ಸಂವಿಧಾನ ನೀಡಿ75 ವರ್ಷಗಳಾದರೂ ಮಾದಿಗ ಸಮುದಾಯದ ಮಕ್ಕಳು ಶಿಕ್ಷಣ ಪಡೆಯುವಲ್ಲಿ ಹಿಂದೆ ಇದ್ದಾರೆ , ಶಿಕ್ಷಣ ಪಡೆದು ದೇಶದ ಅತ್ಯುನತ ಉದ್ದೇಗಳಲ್ಲಿ ಸ್ಥಾನಪಡೆಯುವ ಪ್ರಯತ್ನವಾಗಬೇಕೆಂದು ತುಮಕೂರು ಗ್ರಾಮಾಂತರದ ಶಾಸಕ ಬಿ ಸುರೇಶ್ ಗೌಡ ರವರು ತಿಳಿಸಿದರು.

ನಗರದ ಎಸ್ ಐ ಟಿ ಕಾಲೇಜಿನ ಬಿರ್ಲಾ ಸಭಾಗಂಣದಲ್ಲಿ ಕರ್ನಾಟಕ ಮಾದಿಗ ದಂಡೋರ ಮತ್ತು ಮಾದಿಗ ವಿದ್ಯಾರ್ಥಿ ಯುವ ಪರಿಷತ್ ವತಿಂದ ಪರಮಪೂಜ್ಯ ಶ್ರೀ ಗುರು ಆದಿಜಾಂಬವ ಜಯಂತಿ ಮಾದಿಗ ಸಮುದಾಯದ ಸಂತರ ಸ್ಮರಣೆ, 8ನೇ ಶೈಕ್ಷಣಿಕ ಜಾಗೃತಿ ಸಮಾ ವೇಶ, ಪ್ರತಿಭಾ ಪುರಸ್ಕಾರ, ತುಮಕೂರು ಗ್ರಾಮಾಂತರ ತಾಲ್ಲೂಕಿನ ಜಾತಿಗಣತಿ ಬಿಡುಗಡೆ, ಶೈಕ್ಷಣಿಕ ಮಾರ್ಗದರ್ಶನದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾದಿಗ ವಧು-ವರರ ಅನ್ವೇಷಣಾ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಮಕ್ಕಳು ಮೊದಲಿಗೆ ಶಿಕ್ಷಣ ನಂತರ ಹೋರಾಟ ಮಾಡಿ , ಐಎಎಸ್ ,ಐಪಿಎಸ್ , ಕೆ ಎ ಎಸ್ ಉದ್ಯೋಗಗಳಲ್ಲಿ ಮಾದಿಗ ಸಮುದಾಯದ ಮಕ್ಕಳು ಇಲ್ಲದಿರುವುದು ದುರಾದೃಷ್ಟಕರ ಸಂಗತಿ, ಮುಂದಿನ ದಿನದಲ್ಲಿ ಹೆಚ್ಚು ಒತ್ತು ಶಿಕ್ಷಣಕ್ಕೆ ನೀಡುವಂತೆ ಮಕ್ಕಳಿಗೆ ಒತ್ತಾಯ ಮಾಡಿದರು .

ಕರ್ನಾಟ ಕ ಮಾದಿಗ ದಂಡೋರ ಸಂಸ್ಥಾಪಕರಾದ ಶಂಕರಪ್ಪ ಮಾತನಾಡಿ ಕಳೆದ ಮೂವತ್ತು ವರ್ಷಗಳಿಂದ ಕರ್ನಾಟಕ ಮಾದಿಗ ದಂಡೋ ೀರ ಸಂಘಟನೆಯ ಮೂಲಕ ಸಮುದಾಯ ಏಳಿಗೆಗೆ ಸಂಘಟ ನೆಯ ಹಾದಿಯನ್ನು ಕಲ್ಪಿಸಿ ನಿರಂತರ ಸಮುದಾಯದ ಸೇವೆಯಲ್ಲಿ ತೊಡಗಿದ್ದೇವೆ ,ಆದರೂ ಸಹ ಸಮುದಾಯದವರು



ಹೆಚ್ಚು ಸಂಘಟಿತರಾಗಿ ಶೈಕ್ಷಣಿಕ, ಆರ್ಥಿಕ,ರಾಜಕೀಯ ಕ್ಷೇತ್ರಗಳಲ್ಲಿ ಅಭಿರುದ್ದಿ ಕೆಲಸ ತ್ವರಿತವಾಗಿ ಆಗಬೇಕಿದೆ , ಮಕ್ಕಳು ಹೆಚ್ಚು ಕ್ರಿಯಾ ಶೀಲಾರಾ ಗಿ ಸ್ವರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಲ್ಗೊಂಡು ರಾಂಕ್ ಪಡೆದು ಅತ್ಯುನತ ಐಎಎಸ್ ,ಐ ಪಿ ಎಸ್, ಉದ್ಯೋಗಗಳನ್ನು ಪಡೆದು ತಂದೆ-ತಾಯಿಗಳ ಹೆಸರನ್ನು ಉಳಿಸಿ ಸಮಾಜದಲ್ಲಿ ಗೌರವ ವನ್ನು ತಂದುಕೊಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು ,ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದರೆ ಮೀಸಲಾತಿಯ ಉಪಯೋಗ ವಾಗಲಿದೆ ,ತಂದೆ-ತಾಯಿಗಳು ಮಕ್ಕಳು ವಿದ್ಯಾಭಾಸ ಜೊತೆ ಸಂಸ್ಕಾರ ಕಲಿಸಿದರೆ ಜ್ಞಾನ ದೊರೆಯುತ್ತೆ ಎಂದರು .

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜೇನೀಯರ್ ಎನ್ ಸಿ ಕೃಷ್ಣಕಾಂತ್ ಮಾತಾಡಿ ಅಂಬೇಡ್ಕರ್ ರವರ ಮಾರ್ಗದರ್ಶನದಂತೆ ವಿದ್ಯಾರ್ಥಿಗಳು ಶಿಕ್ಷಣ ಜೊತೆಗ್ ಹೋರಾಟ ಮನೋಭಾವನೆ ಬೆಳೆಸಿಕೊಳ್ಳಬೇಕಿದೆ , ಬಡತನ'ದಿಂದ ಹೊರಬರಲು ಶಿಕ್ಷಣಕ್ಕೆ ಪ್ರಾಮುಖ್ಯತೆ ಹೆಚ್ಚು ನೀಡಬೇಕು , ಉನ್ನತ ಶಿಕ್ಷಣ ಪಡೆದ ು ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮೀಸಲ ಾತಿಯ ಉಪಯೋಗ ಪಡೆದು ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ರೂಪಿಸಿ ಕೊಳ್ಳಬೇಕು ಎಂದರು.

ಆಧುನಿ ಕ ಜಗತ್ತಿನ್ನಲ್ಲಿ ಮಕ್ಕಳು ಮ್ಯಾಬೈಲ್ ಗಳ ಬಳಕೆಯಿಂದ ಏಕಾಗ್ರತೆಯನ್ನು ಕಳೆದುಕೊಳ್ಳುತಿದ್ದಾರೆ,

ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಬಳೆಯಬೇಕಾದರೆ ಸಮಯ ಪ್ರಜ್ಞೆ ಮತ್ತು ಶಿಸ್ತು ವಿದ್ಯಾರ್ಥಿಗಳು ಜೀವನದಲ್ಲಿ ರೋಪಿಸಿಕೊಳ್ಳಬೇಕು, ಹಾಗೂ ಒಳ್ಳೆಯ ಸ್ನೇತರ ಬಳಗ, ಓದಿನ ಕಡೆಗೆ ಆಸಕ್ತಿಯನ್ನು ಹೆಚ್ಚುಸುವ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ತೊಡಗಬೇಕು ಎಂದು ತುಮ ಕೂರು ವಿಶ್ವ ವಿದ್ಯಾನಿಲಯದ ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ . ಶ್ರೀನಿವಾಸ್ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳಿಸಿದರು.

ಮಾದಿಗ ವಿದ್ಯಾರ್ಥಿ ಯುವ ಪರಿಷತ್ ರಾಜ್ಯಾಧ್ಯಕ್ಷ ರವಿವರ್ಮ ಕುಮಾರ್ ವಿ ರವರು ಮಾತನಾಡಿ ರಾಜ್ಯದಲ್ಲಿ ನಮ್ಮ ಸಮುದಾಯದ ಮಕ್ಕಳು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಸಮಾಜದಲ್ಲಿ ಅತ್ಯುನ್ನತ ಉದ್ಯೋ ಗಗಳನ್ನು ದಕ್ಕಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ರಾಜಕೀಂುವಾಗಿ ಸಮುದಾಯ ಬೆಳೆಯಬೇಕು,ಸಮುದಾಯದ ವಿದ್ಯಾರ್ಥಿಗಳು ಸಮಾಜದಲ್ಲಿ ಮುಂಚೂಣಿಗೆ ಬರಬೇಕು ವಿದ್ಯಾರ್ಥಿ ಯುವ ಪರಿಷತ್ ನ ಆಶಯವಾಗಿದೆ . ಕಳೆದ ವರ್ಷ ಕಾರ್ಯಕ್ರಮದಲ್ಲಿ ಹೇಳಿದಂತೆ ತುಮಕೂರು ಗ್ರಾಮಾಂತರದ ಮಾದಿಗ ಸಮುದಾಯದ ಜಾತಿ ಗಣತಿಯನ್ನು ಪೂರ್ಣ ಗೊಳಿಸಿದ್ದೇವೆ , ಆದಕ್ಕೆ ನನ್ನ ವಿದ್ಯಾರ್ಥಿ ಯುವ ಪರಿಷತ್ ನ ಬಳಗದ ಶ್ರಮ ಹೆಚ್ಚಿದೆ ಎಂದರು .

ಜಾತಿ ಸಮೀಕ್ಷೆಯ ವೇಳೆ ಸಹಕಾರ ನೀಡಿದ ಗ್ರಾಮಾಂತರ ಶಾಸಕ ಬಿ ಸುರೇಶ್ ಗೌಡರವರನ್ನು ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾತು. ಈ ಸಂದರ್ಭ ದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್ ಪ್ರಕಾಶ್ ,ರಾಜ್ಯ ಕಾರ್ಯದರ್ಶಿ,ಚೆನಬಸವಾಯ್ಯ,ರಾಜ್ಯ ಜಂಟಿ ಕಾರ್ಯದರ್ಶಿ ಮಡಿವಾ ಳ ನಾರಾಯಣಸ್ವಾಮಿ,ತುಮಕೂರು ಮತ್ತು.ಕೋಲಾರ ಜಿಲ್ಲೆಗಳ ಮಹಿಳಾ.ಘಟಕದ ಅಧ್ಯಕ್ಷರಾದ ಕಮಲಮ್ಮ,ವೆಂಕಟರತ್ನಮ್ಮ ಮುಳುಕುಂಟೆ ರವೀಂದ್ರ,ಕಲ್ಲೂರು ಹುಚ್ಚಣ್ಣ ,ಅರಸಿಕೆರೆ ವೆಂಕಟೇಶ್ ಸೇರಿದಂತೆ ವಿದ್ಯಾರ್ಥಿಗಳು ,ಪೋಷಕರು ಉಪಸ್ಥಿತರಿದ್ದರು .

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ' ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು - ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಮಾ. 12, 13ರಂದು ತುಮಕೂರು ಜಿಲ್ಲಾ ಮಟ್ಟದ ಕ್ರೀಡಾಕೂಟ

ತುಮ ಕೂರು: ಕೇಂದ್ರ ಯುವ ಕಾರ್ಯಕ್ರಮ ಹಾಗೂ ಕ್ರೀಡಾ ಸಚಿವಾಲಯ, ಮೈ ಭಾರತ್-ಮೇರಾ ಯುವ ಭಾರತ್ ತುಮಕೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತುಮಕೂರು ವಿಶ್ವವಿದ್ಯಾನಿಲಯ ಹಾಗೂ ಡಾ: ಬಿ.ಆರ್. ಅಂಬೇಡ್ಕರ್ ಯುವಜನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಮಾರ್ಚ್ 12 ಹಾಗೂ 13ರಂದು ಬೆಳಿಗ್ಗೆ 11 ಗಂಟೆಗೆ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ "ತುಮಕೂರು ಜಿಲ್ಲಾ ಮಟ್ಟದ ಕ್ರೀಡಾಕೂಟ-2025-26" ವನ್ನು ಏರ್ಪಡಿಸಲಾಗಿದೆ.

ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ಹಾಗೂ ಸಂಸದ'ರಾದ ವಿ. ಸೋಮಣ್ಣ ಅವರ ಘನ ಉಪಸ್ಥಿತಿಯಲ್ಲಿ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಕ್ರೀಡಾಕ'ೂಟವನ್ನು ಉದ್ಘಾಟಿಸುವರು. ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಅಧ್ಯಕ್ಷತೆವಹಿಸುವರು.

ಕ್ರೀಡಾಕೂಟದಲ್ಲಿ ಯುವಕರಿಗಾಗಿ ವಾಲಿಬಾಲ್(ಗುಂಪು ಆಟ), ಅಥ್ಲೆಟಿಕ್ಸ್-200 ಮೀಟರ್ ಓಟ, ಉದ್ದ ಜಿಗಿತ, ಗುಂಡು ಎಸೆತ ಹಾಗೂ ಯುವತಿಯರಿಗಾಗಿ ಹಗ್ಗ ಜಗ್ಗಾಟ(ಟಗ್‌ಆಫ್‌ವಾರ್) (ಗುಂಪು ಆಟ), ಅಥ್ಲೆಟಿಕ್ಸ್-100 ಮೀಟರ್ ಓಟ, ಉದ್ದ ಜಿಗಿತ, ಗುಂಡು ಎಸೆತ ಪಂದ್ಯಗಳನ್ನು ಆಯೋಜಿಸಲಾಗಿದೆ.

ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಟ್ರೋಫಿ, ಮೆಡಲ್ಸ್, ಪ್ರಮಾಣ ಪತ್ರವನ್ನು ನೀಡಲಾಗುವುದು. ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾದ ಯುವಕ/ಯುವತಿಯರು ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕ್ರೀಡಾಕೂಟ ಸಂಚಾಲಕರಾದ ರಾಜಶೇ ಖರ್ ಕೆ.(ಮೊ.ಸಂ.9739579869), ವೀರೇಂದ್ರ ಪ್ರಸಾದ್ (ಮೊ.ಸಂ.9353646423) ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

"ಸಂತೋಷ ಪಡಬೇಕಾದ ಲೈನ್ ಮ್ಯಾನ್ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬಲಿ



ತಿಪಟೂರು: ಕಳೆದ ಒಂದೂವರೆ ವರ್ಷದ ಹಿಂದೆ ವಿವಾಹವಾಗಿದ್ದು ಒಂದೆ ದೇಹ ಎರಡು ಜೀವ ಎಂಬಂತೆ ಇದ್ದ ದಂಪತಿಗಳು ತನ್ನ ಪತ್ನಿಗೆ ಒಂದುವಾರದ ಇಂದೆಯಷ್ಟೆ ಹದ್ದೂರಿಯಗಿ ಸಿಮಂತ ಕಾರ್ಯಮಾಡಿದ್ದು ಕುಷಿಯಿದ ಸಂಪತ್ತಿ ಜೀವನ ಸಾಗಿಸುತ್ತಿದ್ದರು. ತನ್ನ ಪತ್ನಿ ಇನ್ನೆನ್ನು 2.3 ದಿನಗಳಲ್ಲಿ ಮಗು ಜನನದ ನಿರೀಕ್ಷೆಯಲ್ಲಿದ್ದ ಲೈನ್ ಮ್ಯಾನ್ ಗೆ ಬೆಸ್ಕಾಂ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಲೈನ್ ಮ್ಯಾನ್ ಬಲಿಯಾಗಿರುವ ಘಟನೆ ನಡೆದಿದೆ.

ತಾಲೂಕಿನ. ಚೌಡ್ಲಾಪುರ ಗ್ರಾಮದ ಬಳಿ ವಿದ್ಯುತ್ ಪರಿವರ್ತಕ (ಟಿ ಸಿ) ಅಳವಡಿಸುವ ವೇಳೆ ವಿದ್ಯುತ್ ಹರಿದು ಕಲ್ಲುಶೆಟ್ಟಿಹಳ್ಳಿ ಗ್ರಾಮದ ನಿವಾಸಿ ಹಾಗೂ ಲೈನ್‌ಮ್ಯಾನ್ ಕೆ.ಪಿ. ಮನು (26) ಸಾವನ್ನಪ್ಪಿದ್ದಾರೆ.

ಎಂದಿನಂ ತೆ ಕೆಲಸಕ್ಕೆ ತೆರಳಿದ್ದ ಲೈನ್‌ಮ್ಯಾನ್ ಮನು ಹಾಗೂ ಜಂಗಲ್ ಕ್ಲಿಯರೆನ್ಸ್ ಸಿಬ್ಬಂದಿ ಟಿಸಿ ಬದಲಾಯಿಸುವ ವೇಳೆ ವಿದ್ಯುತ್ ಶಾಕ್ ತಗುಲಿ ಕಂಬದಿಂ ದ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಟಿ ಸಿ. ಬದಲಾಯಿಸುವ ಸಂದರ್ಭದಲ್ಲಿ ಬೆಸ್ಕಾಂ ಅಧಿಕಾರಿಗಳು ಲೈನ್ ಕ್ಲಿಯರ್ (ಮಾರ್ಗಮುಕ್ತತೆ) ನೀಡದೆ ಕರ್ತವ್ಯಕ್ಕೆ ಚಾಲನೆ ನೀಡಿರುವುದು ಅಧಿಕಾರಿಗಳ ನಿರ್ಲಕ್ಷ ಎದ್ದು ಕಾಣುತದೆ. ಎಂದು ಸಾರ್ವಜನಿಕರು ಆರೋ ಪಿಸಿದ್ದಾರೆ. ಲೈನ್‌ಮ್ಯಾನ್ ಸಾವಿಗೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಗ್ರಾಮಸ್ಥರು ಹಾಗೂ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಸ್ಕಾಂ ಬಿಳಿಗೆರೆ ಶಾಖೆಯ ಕಿರಿಯ ಇಂಜಿನಿಯರ್ ಕುಶಲಾಕ್ಷ ಅವರ ನಿರ್ಲಕ್ಷ್ಯ ದಿಂದ ಬಿಳಿಗೆರೆ ವ್ಯಾಪ್ತಿಯಲ್ಲಿ ಈಗಾಗಲೇ ಮೂರು ಅಪಘಾತಗಳು ಸಂಭವಿಸಿದರು ಬೆಸ್ಕಾಮ್ ಅಧಿಕಾರಿಗಳು ಮಾತ್ರ ಹೆಚ್ಚೆತ್ತುಕೊಳ್ಳುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋ ಪಿಸಿದರು. ಅವರ ವಿರುದ್ಧ ತಕ್ಷಣ ಕ್ರಮ ಕೈಗೊಂಡು ಅಮಾನತುಗೊಳಿಸಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಇದಲ್ಲದೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಮೃತನ ಕುಟುಂಬಕ್ಕೆ ಸಮರ್ಪಕ ಪರಿಹಾರ ನೀಡಬೇಕು ಹಾಗೂ ಮೃತನ ಪತ್ನಿಗೆ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.ಕಳೆದ ವರ್ಷದ ಹಿಂದೆ ಮದುವೆಯಾಗಿದ್ದ ಮನು ಹೆಂಡತಿ ತುಂಬು ಗರ್ಭಿಣಿ. ಹೆರಿಗೆಗೆ ಆಸ್ಪತ್ರೆಯಲ್ಲಿ ದಿನಾಂಕ ನಿಗದಿಯಾಗಿದೆ. ಮಗು ಜನನದ ಸಂತೋಷ ಅನುಭವಿಸಬೇಕಾದ ಲೈನ್ ಮ್ಯಾನ್ ಶವವಾ ಗಿ ಮಲಗಿರುವುದನ್ನು ಕಂಡು. ಗ್ರಾಮಸ್ಥರು ಸಾರ್ವಜ ನಿಕರು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು"

ಗುಬ್ಬಿ ಪಟ್ಟಣದಲ್ಲಿ ವೈಟ್ ಟಾಪಿಂಗ್ : ವಾಹನ ಸಂಚಾರ ಮಾರ್ಗ ಬದಲಾವಣೆ



ತುಮಕೂರು: ಗುಬ್ಬಿ ಪಟ್ಟಣದಲ್ಲಿ ಹಾದುಹೋಗಿರುವ ಹಳೆಯ ರಾಷ್ಟ್ರೀಯ ಹೆದ್ದಾರಿ-206ರಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗುಬ್ಬಿ ಮಾರ್ಗವಾಗಿ ನಿಟ್ಟೂರು ಕಡೆಗೆ ಸಂಚರಿಸುವ ವಾಹನಗಳ ಮಾಗ ರ್ದಲ್ಲಿ ಬದಲಾವಣೆ ಮಾಡಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಆದೇಶ ಹೊರಡಿಸಿದ್ದಾರೆ.

ತುಮಕೂರಿನಿಂದ ಗುಬ್ಬಿ ಮಾರ್ಗವಾಗಿ ನಿಟ್ಟೂರು ಕಡೆಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್ಸುಗಳು ಸಿಂಗೋ ನಹಳ್ಳಿ ಮಾರ್ಗವಾಗಿ ಹಾಲಿ ಗುಬ್ಬಿ ಬಸ್ ನಿಲ್ದಾಣಕ್ಕೆ ಬಂದು ಪ್ರಯಾಣಿಕರನ್ನು ಇಳಿಸಿ ವಾಪಸ್ ಅದೇ ಮಾರ್ಗವಾಗಿ ತೆರಳಿ ಮುದಿಗರೆ ಬ್ರಿಡ್ಜ್ ಬಳಿ ಹೊಸ ಎನ್‌ಹೆಚ್-73 ರಸ್ತೆ ಮೂಲಕ ನಿಟ್ಟೂರು ತಿಪಟೂರು ಕಡೆಗೆ ತೆರಳುವುದು.

ಗುಬ್ಬಿ ಪಟ್ಟಣ ಮಾರ್ಗವಾಗಿ ನಿಟ್ಟೂರು ಕಡೆಯಿ ಂದ ತುಮಕೂರು ಕಡೆಗೆ ಸಂಚರಿಸುವ ಕೆಎಸ್‌ಆ ರ್‌ಟಿಸಿ ಬಸ್ಸುಗಳು ಹಾಲಿ ಹಳೆಯ ರಾಷ್ಟ್ರೀ ಯ ಹೆದ್ದಾರಿ ಮತ್ತಿಘಟ್ಟ ಗೇಟಿನಿಂದ ಸಿಐಟಿ ಕಾ ಲೇಜು, ಹೇರೂರು, ಗುಬ್ಬಿ ಟೌನ್ ಮಾರ್ಗ ವಾಗಿ ಈ ಹಿಂದಿನಂತೆಯೇ ಹಳೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಏಕಮುಖವಾಗಿ ಮಾತ್ರ ಕಾರ್ಯಾಚರಣೆಯಾಗುವುದು.

ತುಮಕೂರು ಕಡೆಯಿಂದ ಗುಬ್ಬಿ ನಗರಕ್ಕೆ ಬರುವ ಲಘು ವಾಹನಗಳು ರಾಷ್ಟ್ರೀಯ ಹೆದ್ದಾರಿ 206 ಬೈಪಾಸ್ ರಸ್ತೆ, ಬಿದರೆ ಗೇಟ್-ಗುಬ್ಬಿ ರೈಲು ನಿಲ್ದಾಣ ರಸ್ತೆ ಮಾರ್ಗವಾಗಿ ಗುಬ್ಬಿ ಪಟ್ಟಣ ಸಂಪರ್ಕಿಸುವುದು.

ಈ ಮಾರ್ಗ ಬದಲಾವಣೆಯ ಆದೇಶವು ದಿನಾಂಕ: 25-2-2026 ರಿಂದ 25-4-2026ರವರೆಗೆ ಇರಲಿದ್ದು, ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವಂತೆ, ತಪ್ಪಿದ್ದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮವಹಿಸುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿ ಅವರು ಆದೇಶಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಕೈಗಾರಿಕೆ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿ ವಶ: ಡಿಸಿ ಕಚೇರಿ ಬಳಿ ಧರಣಿ ಪ್ರತಿಭಟನೆ



ತುಮ ಕೂರು:ಕೆರೆಗಳ ಗೋಡು ಮಣ್ಣನ್ನು ತಮ್ಮ ತೋಟಗ'ಳಿಗೆ ಹಾಕಿಕೊಳ್ಳಲು ರೈತರಿಗೆ ಅನುಮತಿ ನೀಡಬೇಕು. ಕೈಗಾರಿಕೆ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವುದನ್ನು ಕೈಬಿಡಬೇಕು ಹಾಗೂ ಇನ್ನಿತರ ಬೇಡಿಕೆಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ರೈತ ಸಂಘದ ಹಾಗೂ ಹಸಿರುಸೇನೆಯ ರಾಜ್ಯ ಸ'ಂಚಾಲಕ ಆನಂದ ಪಟೇಲ್ ನೇತೃತ್ವದಲ್ಲಿ ನೂರಾರು ರೈತರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಗರದ ಟೌನ್‌ಹಾಲ್ ವೃತ್ತದಲ್ಲಿ ಸಮಾವೇಶಗೊಂಡ ಕುಣಿಗ'ಲ್,ಗುಬ್ಬಿ, ಕೊರಟಗೆರೆ,ಚಿಕ್ಕನಾಯಕನಹಳ್ಳಿ ಹಾಗೂ ಇನ್ನಿತರ ತಾಲೂಕುಗಳ ರೈತರು,ಸರಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿ ಟೌನ್‌ಹಾಲ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳ ಕಚೇರಿ ಬಳಿ ಕೆಲ ಕಾಲ ಧರಣಿ ನಡೆಸಿ, ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧಿ ಕಾರಿಗಳ ಕಚೇರಿ ಬಳಿ ಸಮಾವೇಶಗೊಂಡ ರೈತರ'ನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಚಾಲಕ ಆನಂದ ಪಟೇಲ್,ರಾಜ್ಯ ಸರಕಾರ ಕೈಗಾರಿಕೆಗಳ ಅಭಿವೃದ್ದಿ ಹೆಸರಿನಲ್ಲಿ ಕೆಐಎಡಿಬಿ ಎಂಬ ಸಂಸ್ಥೆಯ ಮೂಲಕ ರೈತರ ಫಲವತ್ತಾದ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಸ್ವಾಧೀನ ಪಡಿಸಿಕೊಂಡು ಕೆಲವು ವರ್ಷಗಳ ನಂತರ ಉದ್ದಿಮೆ ದಾರರಿಗೆ ಮಾರಾಟ ಮಾಡುವ ಮೂಲಕ ರಿಯಲ್ ಎಸ್ಟೇಟ್ ದಂಧೆಗೆ ಕುಮ್ಮಕ್ಕು ನೀಡುತ್ತಿದೆ. ಅನ್ನ ಬೆಳೆಯುವ ರೈತನ ಬಳಿ ಭೂಮಿ ಇರಬೇಕೇ ಹೊರತು, ಉದ್ದಿಮೆದಾರರ ಬಳಿ ಅಲ್ಲ.ಸರಕಾರ ಕೆಐಎಡಿಬಿ ಮೂಲಕ' ಇದುವರೆಗೂ ರೈತರಿಂದ ಕೈಗಾರಿಕೆಗಳಿಗೆ ವಶಪ ಡಿಸಿಕೊಳ್ಳಲಾದ ಭೂಮಿ, ಸ್ಥಾಪನೆಯಾದ ಕೈಗಾರಿಕೆಗಳು, ಕೆಲಸ ಮಾಡುತ್ತಿರುವ ಉದ್ಯೋಗಿಗಳ ವಿವರ ನೀಡಿಲ್ಲ. ಸರಕಾರ ಈ ವಿಚಾರವಾಗಿ ಮೊದಲು ಶ್ವೇತ ಪತ್ರ ಒದಗಿಸಬೇಕು ಎಂದು ಆಗ್ರಹಿಸಿದರು.

ನೀರಿನ ಮೂಲಗಳಾದ ಕೆರೆ ಕಟ್ಟೆಗಳಲ್ಲಿ ಇಂದು ಹೂಳು ತುಂಬಿದೆ.ರೈತರ ಜಮೀನಿನಲ್ಲಿದ್ದ ಮಣ್ಣು ಮಳೆಗಾಲದಲ್ಲಿ ನೀರಿನೊಂದಿಗೆ ಕೆರೆ ಸೇರುತ್ತಿದೆ. ಕೆರೆಯ ಹೂಳು ಮಣ್ಣಿನ ಮೇಲೆ ರೈತರಿಗೆ ಹಕ್ಕಿದೆ.ಆದರೆ ಸರಕಾರ ಕ್ಯೂ ಮೀಟರ್ ಲೆಕ್ಕದಲ್ಲಿ ಕೆರೆಯ ಗೋಡು ಮಣ್ಣನ್ನು ಮಾರಿಕೊಳ್ಳಲು ಹೊರಟಿದೆ.ಇಟ್ಟಿಗೆ ಪ್ಯಾಕ್ಟರಿಗಳ ಮಾಲೀಕರಿಗೆ ಕೆರೆಯ ಮಣ್ಣು ಮಾರಿ, ಸಂಪನ್ಮೂಲ ಕ್ರೂಢೀಕರಣಕ್ಕೆ ಮುಂದಾಗಿರುವುದು ನಾಚಿಕೇಗೇಡಿನ ಸಂಗತಿ. ಸರಕಾರ ಕೂಡಲೇ ಕೆರೆಯ ಕೆನೆ ಮಣ್ಣನ್ನು ರೈತರು ತಮ್ಮ ಹೊಲ, ಗದ್ದೆಗಳಿಗೆ ಟ್ರಾಕ್ಟರ್‌ಗಳು, ಎತ್ತಿನ ಗಾಡಿಗಳಲ್ಲಿ ತೆಗೆದುಕೊಂಡು ಹೋಗಲು ಅನುಮತಿ ನೀಡಬೇಕು. ರಾಗಿ ಖರೀದಿಗಳಲ್ಲಿ ಆಗುತ್ತಿರುವ ತೊಂದರೆಯನ್ನು ಸರಿಪಡಿ ಸಬೇಕೆಂದು ಎಂದು ಆನಂದ ಪಟೇಲ್ ಒತ್ತಾಯಿಸಿದರು.

ಈ ಸರಕಾರ ಬಂದು ಮೂರು ವರ್ಷ ಕಳೆದರೂ ಒಂದೇ ಒಂದು ಬಗರ್‌ಹುಕ್ಕುಂ ಕಮಿಟಿ ಸಭೆ ನಡೆಸಿಲ್ಲ. ಮೂರು ತಲೆವ ಾರಿನಿಂದಲೂ ಸರಕಾರಿ ಭೂಮಿ ಉಳುಮೆ ಮಾಡುತ್ತಾ ಫಾರಂ. ನಂಬರ್ 50,53 ಅರ್ಜಿ ಸಲ್ಲಿಸಿದ್ದರೂ ಇದುವರೆಗೂ ಮಂಜುರಾತಿ ನೀಡಿಲ್ಲ.ಬದಲಾಗಿ ಅರಣ್ಯ ಇಲಾಖೆಯ ಮೂಲಕ ಬಗರ್ ಹುಕ್ಕಂ ರೈತರಿಗೆ ಕಿರುಕುಳ ನೀಡಿ ಒಕ್ಕಲೆಬಿಸಲು ಹೊರಟಿದೆ.ಜಿಲ್ಲಾಡಳಿತ ಇದಕ್ಕೆ ಅವಕಾಶ' ನೀಡದೆ, ಅರ್ಹರಿಗೆ ಸಾಗುವಳಿ ಚೀಟಿ ನೀಡಿ, ತಲೆಮಾರುಗಳಿಂದ ಉಳುಮೆ ಮಾಡುತ್ತಿರುವ ಜನರಿಗೆ ನ್ಯಾಯ ಒದಗಿಸಬೇಕು. ಹಾಗೆಯೇ ಎತ್ತಿನ ಹೊಳೆ, ಭದ್ರ ಮೇಲ್ದಂಡೆ ಬೇಗ ಪೂರ್ಣಗೊಳಿಸುವುದು ಮತ್ತು ಹೇಮಾವತಿ ಯೋಜನೆಯಿಂದ ನಿಗಧಿತ 24.08 ಟಿ.ಎಂ.ಸಿ ನೀರು ತರಲು ಅಗತ್ಯ ಕ್ರಮವನ್ನು ಜಿಲ್ಲಾಡಳಿತ ಕೈಗೊಳ್ಳಬೇಕೆಂದು ಆನಂದಪಟೇಲ್ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ರೈತರ ದೂರುಗಳ ಹಿನ್ನೆಲೆಯಲ್ಲಿ ಚಿಕ್ಕನಾ ಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ಎಪಿಎಂಸಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಾವು ಭೇಟಿ ನೀಡಿದ ವೇಳೆ 50 ಕೆ.ಜಿ. 900 ಗ್ರಾಂ ಮಾತ್ರ ತೆಗೆದುಕೊಳ್ಳಲಾಗುತ್ತಿದೆ. ನಿಮ್ಮ ದೂರಿನ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶೀಲನೆ ನಡೆಸುತ್ತೇನೆ. ಹಾಗೆಯೇ ಬೆಸ್ಕಾಂಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದರೆ ದೂ.7304975519 ಅಥವಾ 0816–2213400 ಕರೆ ಮಾಡಿದರೆ ತಕ್ಷಣ ಸ್ಪಂದಿಸುವ ಕೆಲಸ ಮಾಡುತ್ತೇವೆ.ನಾನು ಕೂಡ ಇದನ್ನು ಪ್ರತಿದಿನ ಮೇಲುಸ್ತುವಾರಿ ನಡೆಸುತ್ತಿದ್ದು, ರೈತರಿಗೆ ಯಾವುದೇ ತೊಂದರೆಯಾಗದ ರೀತಿ ಅಗತ್ಯ ಕ್ರಮ ವಹಿಸಲಾಗುವುದು.ರಾಗಿ ಹಣವನ್ನು ತಕ್ಷಣ ರೈತರ' ಖಾತೆಗೆ ಹಾಕಲಾಗುತ್ತಿದೆ. ಇಕೆವೈಸಿ ಸಮಸ್ಯೆ ಇದ್ದವ ರಿಗೆ ಮಾತ್ರ ಹಣ ತಕ್ಷಣಕ್ಕೆ ದೊರೆಯುತ್ತಿಲ್ಲ. ಅವರು ತಮ್ಮ ಖಾತೆ ಇರುವ ಬ್ಯಾಂಕಿಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿದರೆ ತಕ್ಷಣವೇ ಹಣ ನಿಮ್ಮ ಖಾತೆಗೆ ಸೇರಲಿದೆ ಎಂದರು

ಪ್ರತಿಭ'ಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷರಾಧ ಧನಂಜಯ್ ಆರಾಧ ್ಯ, ಸಣ್ಣರಾಮೇಗೌಡ,ಚಿರತೆ ಚಿಕ್ಕಣ್ಣ, ಪಂಡಿತಣ್ಣ, ಅನಿಲ್‌ಕುಮಾರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಸಹಾಯಧನದ ಡಿಡಿ ವಿತರಣೆ. ಚಿಕ್ಕನಾಯಕನಹಳ್ಳಿ : ತಾಲೂಕಿನ ಶೆಟ್ಟಿಕೆ ರೆ ಹೋಬಳಿಯ ಮಾದಿಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ದೇವಾಲಯದ ನಿರ್ಮಾ ಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರುಗೊಂಡ .150000/– ಮೊತ್ತದ ಡಿಡಿ ಯನ್ನು ವಿತರಣೆ ಮಾಡಲಾಯಿತು

ಈ ಸಂದ'ರ್ಭದಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ನಂದೀಶ ಕುಮಾರ, ಉಪಾಧ್ಯಕ್ಷರಾದ ರಂಗನಾಥ ಸ್ವಾಮಿ, ಶಾಲಾ ಮುಖ್ಯ ಗುರುಗಳಾದ ಮಲ್ಲಿಕಾರ್ಜುನಯ್ಯ, ಸೇವಾಪ್ರತಿನಿಧಿ ಜಯಂತಿ, ಸಮಿತಿ ಸದಸ್ಯರುಗಳಾದ ವಿನಯ್, ಅಭಿಷೇಕ್, ಗಂಗಾದ'ರಯ್ಯ, ಸ್ವ ಸಹಾಯ ಸಂಘಗಳ ಸದಸ್ಯರುಗಳು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಎಲ್ಲ ಕ್ಷೇತ್ರಗಳಲ್ಲೂ ಪುರುಷರಿಗೆ ಸಮನಾಗಿ ಮಹಿಳೆಯರ ಸ್ಪರ್ಧೆ; ಶಾಸಕ ಹೆಚ್.ವಿ.ವೆಂಕಟೇಶ್ ಅಭಿಮತ

ವರದಿ: ನಿರಂಜನ್ ಪಾವಗಡ



ಪಾವಗ ಡ: ಪಟ್ಟಣದ ಎಸ್.ಎಸ್.ಕೆ ಬಯಲು ರಂಗವ'ಂದಿರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರ'ಣೆಯನ್ನು ಸೋಮವಾರ ಅದ್ದೂರಿಯಾಗಿ ಆಚರಿಸಲಾಯಿತು.

ಕೌಶಲಾ ್ಯಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಸಂಜೀವಿನಿ, ಕರ್ನಾಟ ಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧ'ನ ಸಂಸ್ಥೆ ಮತ್ತು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ತುಮಕೂರು ಹಾಗೂ ತಾಲ್ಲೂಕು ಆಡಳಿತ, ತಾಲ್ಲೂಕ'ು ಪಂಚಾಯಿತಿ ಪಾವಗಡ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಶಾಸಕರಾದ ಹೆಚ್.ವಿ.ವೆಂಕಟೇಶ್ ಉದ್ಘಾಟಿಸಿದರು.

ನಂತರ' ಮಾತನಾಡಿದ ಅವರು, ದೇಶ ಅಭಿವೃದ್ಧಿ ಕಡೆ ಸಾಗಲು ಮಹಿಳೆಯರ ಪಾತ್ರ ಅಪಾರವಾಗಿದೆ. ಮಹಿಳೆ ಯರು ಪುರುಷರಿಗೆ ಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆ ಮಾಡುತ್ತಿದ್ದಾರೆ.

ಮಹಿಳೆಯರುಸ್ವಾವಲಂಬಿಗಳಾಗಿಜೀವನಕಟ್ಟಿಕೊಳ್ಳಬೇಕು. ಸರ್ಕಾರ'ದ ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದೆ. ಮಹಿಳೆಯರು ಹಣವನ್ನು ವ್ಯರ್ಥ ಮಾಡದೇ ಜವಾಬ್ದಾರಿಯುತವಾಗಿ ಕುಟುಂ ಬ ನಿರ್ವಹಣೆ ಮಾಡುತ್ತಾರೆ.ಮಹಿಳೆಯರು ಹೈನು ಗಾರಿಕೆಯಲ್ಲಿ ತೊಡಗಿದರೆ ಡಿಸಿಸಿ ಬ್ಯಾಂಕ್ ಮೂಲಕ ಹಸು ಸಾಕಾಣಿಕೆ ಮಾಡಲು ಸಾಲ ಸೌಲಭ್ಯ ಒದಗಿಸಲಾಗುವುದು. ಅದನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕು.

ರಾಜಕೀಂ ು ಕ್ಷೇತ್ರದಲ್ಲಿ ಪುರುಷರಿಗೆ ಸಮಾನವಾಗಿ ಮಹಿಳೆ ಯರಿಗೆ ಅವಕಾಶ ಸಿಗುತ್ತಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ ಎಂದರು.

ಸ್ವ–ಸ ಹಾಯ ಸಂಘಗಳ ಒಕ್ಕೂಟದ ಸಿಬ್ಬಂದಿ ಉತ್ತಮ ುವಾಗಿ ಕೆಲಸ ಮಾಡುತ್ತಿದ್ದು ಯೋಜನೆಯ ಸಹಾಯ 'ಧನ ನೇರವಾಗಿ ಫಲಾನುಭವಿಗಳಿಗೆ ದೊರೆಯುವಂತೆ ಮಾಡುತ್ತಿದ್ದಾರೆ. ಮಹಿಳಾ ಸಂಘಗಳ ಸದಸ್ಯರು ಆರ್ಥಿಕವಾಗಿ ಹೆಚ್ಚು ಪ್ರಬಲರಾಗಬೇಕು ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಮುಂದುವರಿಯಬೇಕು ಎಂದು ತಿಳಿಸಿದರು.

ತಾಲ್ಲೂಕಿ ನಲ್ಲಿ ಆಹಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಯಲ್ಲಿ ಮಹಿಳೆ ಯರೇ ಅಧಿಕಾರಿಗಳಾಗಿ ಉತ್ತಮವಾಗಿ ಕಾಯ ರ್ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಸಿದ್ದಾಪುರ ಗ್ರಾಮದಲ್ಲಿ 38 ಕೋಟಿ ರೂ. ವೆಚ್ಚದಲ್ಲಿ ಶ್ರಮಿಕ ಶಾಲೆ ಮತ್ತು ಕಡಮಲಕುಂಟೆಯಲ್ಲಿ 35 ಕೋಟಿ ರೂ. ವೆಚ್ಚದಲ್ಲಿ ಅಲ್ಪ ಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಜೂರು ಮಾಡಲಾಗಿದೆ. ಮುಂದಿನ ತಿಂಗಳಲ್ಲಿ ಎರಡೂ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಮಾಡಲಾಗುವುದು. ನಾಗಲಮಡಿಕೆ ಅಂತ್ಯ ಸುಬ್ರಮಣ್ಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ 34 ಕೋಟಿ ರೂ. ವೆಚ್ಚದಲ್ಲಿ ಟೆಂಡರ್ ಕರೆಯಲಾಗುತ್ತದೆ ಎಂದರು.

ಪ್ರಾಸ್ತಾ ವಿಕವಾಗಿ ಮಾತನಾಡಿದ ತಾ.ಪಂ. ಕಾಯ ರ್ನಿರ್ವಹಣಾಧಿಕಾರಿ ಮಧುಸೂಧನ್, ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪ್ರಬಲರಾಗುತ್ತಿದ್ದು, ಗ್ರಾಮೀಣ ಭಾಗಗಳಲ್ಲಿ ಮಹಿಳೆಯರು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಮೂಲಕ' ಉದ್ಯಮಿಗಳಾಗುತ್ತಿದ್ದಾರೆ. ಸಮಾಜದ ಬೆಳವ ಣಿಗೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

ಈ ವೇಳೆ ಮಾಜಿ ಸಚಿವ ವೆಂಕಟರಮಣಪ್ಪ, ಸಿಡಿಪಿಓ ಡಿ.ಜಿ.ಸುನೀತಾ, ಬಿಇಓ ಬಿ.ರೇಣುಕಮ್ಮ ಮಾತನಾಡಿದರು. ಈ ಸಂದ'ರ್ಭದಲ್ಲಿ ಸಾಧನ ಸಂಜೀವಿನಿ ಅಧ್ಯಕ್ಷೆ ಎನ್.ಟಿ. ಲತಾ, ಸುಶೀಲಮ್ಮ, ಪೊಲೀಸ್ ವೃತ್ತ ನಿರೀಕ್ಷ ಕರಾದ ಕೆ.ಸುರೇಶ್, ಬಿ.ವಿ.ಮಾರುತಿ ಪ್ರಸಾದ ್, ಹೆಚ್.ವಿ.ರವಿಕುಮಾರ್, ತುಮುಲ್ ನಿರ್ದೇಶ'ಕ ಚಂದ್ರಶೇಖರ ರೆಡ್ಡಿ, ಪುರಸಭೆ ಮಾಜಿ ಅಧ್ಯಕ್ಷರಾದ ಎ.ಶಂಕರ್ ರೆಡ್ಡಿ, ಪಿ.ಹೆಚ್.ರಾಜೇಶ್, ಮಾಜಿ ಸದಸ್ಯ ಟೆಂಕಾಯಲ ರವಿ, ಮುಖಂಡ ಆರ್.ಎ. ಹನುಮಂತರಾಯಪ್ಪ, ಸುಮಾ ಅನಿಲ್, ಉಷಾರಾಣಿ, ಸುಶೀಲಮ್ಮ ಮತ್ತಿತರರು ಇದ್ದರು.

ಒಳ ಮೀಸಲಾತಿ ಜಾರಿಗೆ ಗುಬ್ಬಿ ತಾಲ್ಲೂಕು ಮಾದಿಗ ಸಮುದಾಯದ ಹೋರಾಟ

ಗುಬ್ಬಿ: ಮೀಸಲಾತಿ ಜಾರಿಗೆ ನಿರಂತರ ಹೋರಾಟ ಮಾಡಿದ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಜಾರಿ ವ ಾಡುವಲ್ಲಿ ಸರ್ಕಾರ ವಿಳಂಬನೀತಿ ಅನುಸರಿಸುತ್ತಿದೆ. ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಂ ು ವಾಗಿ ಹಿಂದುಳಿದ ಮಾದಿಗ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಒಳ ಮೀಸಲಾತಿ ಜಾರಿ ಕೂಡಲೇ ಮಾಡಬೇಕು ಎಂದು ಆಗ್ರಹಿಸಿ ತಾಲ್ಲೂಕಿನ ಮಾದಾರ ಮಹಾಸಭಾ, ಮಾದಿಗ ಸಮುದಾಯದ ಮುಖಂಡರು ಹಾಗೂ ದಲಿತಪರ ಸಂಘಟನೆಗಳು ಒಗ್ಗೂಡಿ ತಾಲ್ಲೂಕು ಕಚೇರಿ ಮುಂದೆ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಮುಂದೆ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ನೀಡುವಲ್ಲಿ ಜಾಣತನ ಪ್ರದರ್ಶನ ಮಾಡುತ್ತಿದೆ. ಮೀಸಲಾತಿ ದೊರಕಿ ದರೆ ನಮ್ಮವರು ಸರ್ಕಾರಿ ಹುದ್ದೆ ಪಡೆಯುತ್ತಾರೆ. ಸಮಾಜದಲ್ಲಿ ಬೆಳೆಯುತ್ತಾರೆ ಎಂದು ನಮ್ಮ ದಲಿತ ಮತ್ತೊಂದು ಸಮುದಾಯ ಛಲವಾದಿ ಜನಾಂಗವೇ ನಮಗೆ ಅಡ್ಡಿಯಾಗಿವೆ. ಬೇರೆ ಯಾವ ಜನಾಂಗ ನಮ್ಮನ್ನು ತಿಳಿಯುತ್ತಿಲ್ಲ. ನಮ್ಮ ದಲಿತರೇ ನಮ್ಮ ಏಳಿಗೆ ಸಹಿಸುತ್ತಿಲ್ಲ. ಸರ್ಕಾರದಲ್ಲಿ ನಮ್ಮ ಸಮುದಾಯದ ಮಂತ್ರಿಗಳಿಗೆ ಪ್ರಭಾವಿ ಖಾತೆ ಇಲ್ಲ. ಅನುದಾ ನ ನೀಡುವಲ್ಲಿ ಸಹ ನಮ್ಮ ಜನಾಂಗದ ಮುನಿಯಪ್ಪ, ತಿಮ್ಮಾಪುರ ಅವರನ್ನು ಕೇವಲವಾಗಿ ನೋಡಲಾಗಿದೆ ಎಂದು ಕಿಡಿಕಾರಿದರು.


ಮಾದಾ ರ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕೊಡಿಯಲ ಮಹದೇವು ಮಾತನಾಡಿ ಮಾದಿಗ ಸಮು ದಾಯ ಶತಮಾನಗಳಿಂದ ತುಳಿತಕ್ಕೆ ಬಲಿಯಾದ ಶೋಷಿತ ಸಮಾಜ. ದಲಿತರಲ್ಲಿ ನಮ್ಮ ಗಳನ್ನೇ ತುಳಿಯುವ ಕೆಲಸ ನಿರಂತರ ನಡೆದುಬಂದಿದೆ. ಆದರೆ ಎಚ್ಚೆತ್ತ ಮಾದಿಗ ಸಮಾಜ ಶಿಕ್ಷಣ ಸಂಘಟನೆ ಮೂಲಕ ಹೋರಾಟವನ್ನು ಮೈಗ ೂಡಿಸಿಕೊಂಡು ಸಮಾಜದಲ್ಲಿ ಅಲ್ಲಲ್ಲೇ ಬೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮಗಳ ಬೆಳವ ಣಿಗೆಯನ್ನು ನಮ್ಮ ದಲಿತ ಮತ್ತೊಂದು ಸಮುದಾಯ ಸಹಿಸುತ್ತಿಲ್ಲ. ಇವರ ತಂತ್ರಕ್ಕೆ ಸರ್ಕಾರ ಕೂಡ ಜೊತೆ ಕಾಣಿಸಿಕೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮುದಾಯವನ್ನು ಕಡೆಗಣಿಸಿದರೆ ಮುಂದಿನ ಎಲ್ಲಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ. ಒಳ ಮೀಸಲಾತಿ ನಮ್ಮ ಹಕ್ಕು . ಬಹುಸಂಖ್ಯೆಯ ಮಾದಿಗರು ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿದಿದ್ದಾರೆ. ಮುಖ್ಯವಾಹಿನಿಗೆ ಬರಲು ನಮ್ಮ ಹಕ್ಕೊತ್ತಾಯ ಮಾಡುತ್ತಿದ್ದೇವೆ. ಇದೇ ತಿಂಗಳ 12 ರಂದು ಬೆಂಗಳೂರಿನಲ್ಲಿ ನಡೆಯುವ ಬೃಹತ್ ಹೋರಾಟಕ್ಕೆ ತಾಲ್ಲೂಕಿನ ಎಲ್ಲಾ ಮಾದಿಗ ಸಮುದಾಯ ಅಲ್ಲಿಗೆ ತೆರಳಿದೆ ಎಂದರು.

ಮುಖಂ ಡ ಜಿ.ವಿ.ಮಂಜುನಾಥ್ ಮಾತನಾಡಿ ಮೀಸಲ ಾತಿ ಎಂಬ ಹಸುವನ್ನು ಕಷ್ಟಪಟ್ಟು ಮೇವು ತಿನ್ನಿಸಿ ದಷ್ಟಪುಷ್ಟವಾಗಿ ಬೆಳೆಸಿದ ಮಾದಿಗ ಸಮು ದಾಯಕ್ಕೆ ಹಸುವಿನ ಸುಂದರ ಮುಖ ಮಾತ್ರ ನೀಡಿ, ಹಿಂಬದಿ ಕಾಣದಂತೆ ಹಾಲು ಕರೆದ ಮತ್ತೊಂದು ಸಮುದಾಯ ಸಮಾಜದಲ್ಲಿ ದಷ್ಟಪುಷ್ಟವಾಗಿ ಬೆಳೆದಿದ್ದಾರೆ. ಈಗ ನಮಗೆ ಉಳಿದ ಅ ವಕಾಶ ಮುಖಕ್ಕೆ ಗುದ್ದಿದರೆ ಹಾಲು ಕರೆಯುವವರನ್ನು ಹಸು ಒದೆಯುತ್ತದೆ ಎಂದು ಕತೆಯ ಮೂಲಕ ಜನಾಂಗವನ್ನು ಎಚ್ಚರಿಸಿದರು.

ಮುಖಂಡ ಚೇಳೂರು ಶಿವನಂಜಪ್ಪ ಮಾತನಾಡಿ ಕೊರಟ ಗೆರೆ ಕ್ಷೇತ್ರದಲ್ಲಿ 69 ಸಾವಿರ ಮಾದಿಗ ಸಮುದಾಯವಿದ್ದು ಪರಮೇಶ್ವರ್ ಅವರು ಗೆದ್ದಿದ್ದಾರೆ. ನಮ್ಮ ಮತಗಳಿಂದ ಗೆದ್ದು ಈಗ ನಮ್ಮ ವಿರುದ್ಧ ತಂತ್ರ ರೂಪಿಸುವುದು ಸರಿಯಲ್ಲ. ಕಾಂಗ್ರೆಸ್ ಪಕ್ಷದ ಪ್ರಣಾಳಿ ಕೆ ಅಧ್ಯಕ್ಷರಾಗಿದ್ದ ಪರಮೇಶ್ವರ್ ಅವರು ಮಾತಿನ'ಂತೆ ನಡೆದಿಲ್ಲ. ಸಿದ್ದರಾಮಯ್ಯ ಅವರು ಅವರಂ ತೆ ನಾಟಕ ಆಡದೆ ಇನ್ನೆರೆಡು ದಿನದಲ್ಲಿ ಒಳಮೀಸಲಾತಿ ಜಾರಿಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಒಳ ಮೀಸಲಾತಿ: ನಾಯಕ ಸಮುದಾಯಕ್ಕೂ ಅನ್ಯಾಯ:ಡಿಸಿ ಮೂಲಕ ಸಿಎಂಗೆ ಮನವಿ



ತುಮ ಕೂರು :ಇತ್ತೀಚಿನ ದಿನಗಳಲ್ಲಿ ಮೀಸಲಾತಿ ಕುರಿತಂತೆ ಸರಕಾ ರದಲ್ಲಿ ಉಂಟಾಗಿರುವ ಗೊಂದಲಗಳ ಕುರಿತು ಚರ್ಚೆ ನಡೆಸಲು ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಸಮುದಾಯದ ಮುಖಂಡರು, ಜಿ.ಪಂ.ಮಾಜಿ ಅಧ್ಯಕ್ಷರು, ಶಬರಿ ಮಹಿಳಾ ಪತ್ತಿನ ಸಹಕಾ ರ ಸಂಘದ ಅಧ್ಯಕ್ಷರಾದ ಶಾಂತಲ ರಾಜಣ್ಣ ಅವರ ನೇತೃ ತ್ವದಲ್ಲಿ ವಾಲ್ಮೀಕಿ ವಿದ್ಯಾವರ್ಧಕ ಸಂಘದಕಚೇರಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕುಪ್ಪೂರು ಶ್ರೀಧರ್, ಮೂರು ದಶಕಗಳ ಬೇಡಿಕೆಯಾದ ಪರಿಶಿಷ್ಟ ಪಂಗಡಕ್ಕೆ 7% ಮೀಸಲಾತಿಗಾಗಿ ಹಲವಾರು ಹೋರಾಟಗಳ ನಡೆದಿದೆ.ಈ ಸಂಬಂಧ ವಾಲ್ಮೀಕಿ ಶ್ರೀಗಳ ನೇತೃತ್ವದಲ್ಲಿ186 ದಿನಗಳ ಅಹೋರಾತ್ರಿ ಧರಣಿ ಸತ್ಯಾಗ್ರಹದ ಮೂಲಕ' ಸರಕಾರವನ್ನು ಗಮನ ಸೆಳೆದು ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯಂತೆ ಜನಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ಜಾರಿ ಮಾಡಲು ಆಗ್ರಹ ಮಾಡಲಾಗಿತ್ತು. ಅದರಂತೆ ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿತ್ತು. ರಾಜ್ಯ,ಕೇಂದ್ರ ಸರಕಾರಕ್ಕೆ ಸಮರ್ಪಕವಾಗಿ ಒತ್ತಡ ಹಾಕದ ಹಿನ್ನೆಲೆಯಲ್ಲಿ 9 ನೇ ಶೆಡ್ಯೂಲ್ ಗೆ ಸೇರಿಸಲು ರಾಜ್ಯ ಮತ್ತು ಕೇಂದ್ರ ಸರಕಾರಗಳು ವಿಫಲವಾಗಿದ್ದು, ಪರಿಶಿಷ್ಟ ಪಂಗಡಕ್ಕೆ ಘನ ಘೋರ ಅನ್ಯಾಯ ಎಸಗಿವೆ.ಈ ಮಧ್ಯೆರಾಜ್ಯ ಸರಕಾರ ಜನಸಂಖ್ಯೆಗುಣವಾಗಿ ಮೀಸಲಾತಿಯನ್ನು ಕಲ್ಪಿಸದೆ ಹಳೇ ಮಾದರಿಯಲ್ಲೇ (3%),56,000 ಹುದ್ದೆಗಳನ್ನು ಭರ್ತಿ ಮಾಡಲು ಹೊರಟಿದ್ದು, ರಾಜ್ಯ ಸರಕಾರದ ಈ ನಿರ್ಧಾ ರ ಸಮಾಜ ವಿರೋಧಿ ನಡೆಯಾಗಿದ್ದು, ಇದನ್ನು ವಾಲ್ಮೀಕಿ ಸಮಾಜ ಖಂಡಿಸುತ್ತದೆ ಮತ್ತುಇದನ್ನು ಸರಿಪಡಿಸಿದ ನಂತರ'ವಷ್ಟೇ ಹುದ್ದೆಗಳನ್ನು ಭರ್ತಿ ಮಾಡಬೇಕು ಇಲ್ಲವಾದರೆ ರಾಜ್ಯಾದ್ಯ'ಂತ ಹೋರಾಟವನ್ನು ರೂಪಿಸ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮಾರ್ಚ್ 11 ರಂದು ಜಿಲ್ಲಾಧಿ ಕಾರಿಗಳ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಾಂಕೇತಿಕವಾಗಿ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ಮಾರ್ಚ್ 11 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾಧಿ ಕಾರಗಳ ಕಚೇರಿ ಬಳಿ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಮನವಿ ಮಾಡಲಾಯಿತು.

ಸಭೆಂ ು ಅಧ್ಯಕ್ಷತೆಯನ್ನು ಶಾಂತಲಾರಾಜಣ್ಣ ವಹಿಸಿದ್ದರು. ಮುಖಂ ಡರಾದ ಕೆಂಪಹನು ಮಯ್ಯ, ರಾಮಚಂದ್ರಪ್ಪ, ನಾಗರಾ ಜು, ಸರಸ್ವತಿ, ಧನುಷ್, ಲಕ್ಷ್ಮಿರಂಗಯ್ಯ, ಪ್ರಕಾಶ್. ಎಚ್. ಪಿ, ಧರಣಿಕುಮಾರ್ ಶಿರಾ, ಗಂಗಾಧರ್, ಸೌಭಾಗ್ಯಮ್ಮ, ನವೀನ್‌ಕುಮಾರ್, ಮಂಜುನಾಥ್, ರಾಕೇಶ್, ಮತ್ತಿತರರಿದ್ದರು

SP NEWS ಸಣ್ ಸುದ್ದಿ

ಮಾ.11ರಂದು ಸಾರ್ವಜನಿಕ ಕುಂದು ಕೊರತೆ ಸಭೆ

ತುಮ ಕೂರು: ತುಮಕೂರು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ನೇತೃ ತ್ವದಲ್ಲಿ ಮಾರ್ಚ್ 11 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ತುಮಕೂರು ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಸಾರ್ವಜನಿಕರ ಕುಂದು ಕೊರತೆ ಸಭೆ, ಅಹವಾಲು ಸ್ವೀಕಾರ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಲಕ್ಷ್ಮೀನಾರಾಯಣ ಎ.ವಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿದ್ದರಾಮೇಶ್ವರ ಬೆಟ್ಟಕ್ಕೆ ಬೆಂಕಿ ತುಮಕೂರು ಗ್ರಾಮಾಂತರ ಬೆಳಗುಂಬದ ಸಿದ್ದರಾಮೇಶ್ವರ ಬೆಟ್ಟದ ಅರಣ್ಯಕ್ಕೆ ಬೆಂಕಿ ಹತ್ತಿಕೆ ೂಂಡಿದ್ದು ಅರಣ್ಯ ಇಲಾಖೆ ಹಾಗೂ ಸ್ಥಳಿಯ ಸಿದ್ಧಿವಿನಾ ಯಕ ಗೆಳೆಯರ ಬಳಗ ದ ಯುವಕರು ಜೊತೆಗೂಡಿ ಬೆಂಕಿ ನಂದಿಸುವ ಕಾರ್ಯವನ್ನು ಕೈಗೊಂಡರು

ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ತುಮಕೂರು: ತುಮಕೂರು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ನೀಡಲು ಅರ್ಜಿ ಅಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 15ರವರೆಗೆ ವಿಸ್ತರಿಸಲಾಗಿದೆ.

ಪ್ರಶಸ್ತಿಯನ್ನು 2026ರ ಏಪ್ರಿಲ್ 5ರಂದು ಆಚರಿಸುವ ಡಾ: ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಹಾಗೂ ಏಪ್ರಿಲ್ 14ರಂದು ಆಚರಿಸುವ ಡಾ: ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ದಿನದಂದು ರಾಜ್ಯ ಮಟ್ಟದಲ್ಲಿ ನೀಡಲಾಗುವುದು.

ಆಸಕ್ತರು ಮಾರ್ಚ್ 15ರೊಳಗಾಗಿ ತುಮಕೂರು ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು–ಗ್ರೇಡ್–01 ಕಚೇರಿ ಯನ್ನು ಸಂಪರ್ಕಿಸಿ ಅವಶ್ಯಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಶಿವಣ್ಣ ವಿ.ಎಸ್. ಮನವಿ ಮಾಡಿದ್ದಾರೆ.

ಮಾ.12ರಂದು ನೊಂದ ಮಹಿಳೆಯರಿಂದ ದೂರು ಸ್ವೀಕಾರ

ತುಮಕೂರು: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರ ದ ಜಿಲ್ಲಾ ಬಾಲಭವನ ಆವರಣದಲ್ಲಿ ಮಾರ್ಚ್ 12ರಂದು ಬೆಳಿಗ್ಗೆ 11 ಗಂಟೆಗೆ ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗದಲ್ಲಿ ಸ್ವೀಕೃ ತವಾಗಿರುವ ಮಹಿಳೆಯರ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳ ಸಮಕ್ಷಮ ವಿಚಾರಣೆ ಮಾಡಲಾಗುವುದು ಹಾಗೂ ನೊಂದ ಮಹಿಳೆಯರಿಂದ ಸ್ಥಳದಲ್ಲೇ ದೂರುಗಳನ್ನು ಸ್ವೀಕರಿಸಿ, ನೇರವಾಗಿ ಆಲಿಸಿ, ತ್ವರಿತ ಪರಿಹಾರ ಒದಗಿಸುವ ಅಭಿಯಾನವನ್ನು ಆಯೋಜಿಸಲಾಗಿದೆ.

ಅಭಿಯಾನದಲ್ಲಿ ದೂರುಗಳನ್ನು ತಕ್ಷಣವೇ ಆಲಿಸುವುದು(ಕೌಟುಂಬಿಕ ದೌರ್ಜನ್ಯ, ರಕ್ಷಣೆ, ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು(ಆತ್ಮಹತ್ಯೆ/ ಕೊಲಡ), ಅತ್ಯಾಚಾರಿ, ಪ್ರತ್ಯಾಚಾ ಲೈಂಗಿಕ ಕಿರುಕುಳ, ಕೆಲಸದ ಸ್ಥಳದಲ್ಲಿ ಕಿರುಕುಳ, ಪ್ರೇಮ ಪ್ರಕರಣ, ಜೀವನಾಂಶ, ಮಕ್ಕಳ ಅಭಿರಕ್ಷೆ, ಪೋಷಕರ ಭೇಟಿ, ವಸತಿ ಕಲ್ಪಿಸುವ ಬಗ್ಗೆ, ಆಸ್ತಿ ವಿವಾದ, ಪೊಲೀಸ್ ದೌರ್ಜನ್ಯ, ಹಣ ವಂಚನೆ, ವಿಚ್ಛೇಧನೆ, ಜಾತಿ ನಿಂದನೆ, ಸೈಬರ್ ಕ್ರೈಂ ಇತರೆ), ಗಂಭೀರ ಪ್ರಕರಣಗಳನ್ನು ದಾಖಲಿಸಿಕೊಳ್ಳುವುದು ಮತ್ತು ಮುಂದಿನ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗುವುದು. ಕಾನೂನು ಮಾರ್ಗದರ್ಶನ ಮತ್ತು ಅಗತ್ಯ ನೆರವು ನೀಡಲಾಗುವುದು. ಕಾಲಮಿತಿಯೊಳಗೆ ಪ್ರಕರಣಗಳ ಅನುಸರಣೆ, ಮೊದಲೇ ಮಾಹಿತಿ ನೀಡದೇ ನೇರವಾಗಿ ಬರುವ ದೂರುಗಳನ್ನೂ ಕೂಡ ವಿಚಾರಣೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಬ್ಬೂರು ಪೊಲೀಸ್ ಠಾಣೆ : 2 ಪ್ರತ್ಯೇಕ ಕಾಣೆ ಪ್ರಕರಣ ದಾಖಲು

ತುಮಕೂರು:ಹೆಬ್ಬೂರು ಪೊಲೀಸ್ ಠಾಣೆಯಲ್ಲಿ 2 ಪ್ರತ್ಯೇಕ ಕಾಣೆ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಪ್ರಕರ'ಣ–1: ತುಮಕೂರು ತಾಲ್ಲೂಕು ತೊಂಡಗೆರೆ ಗ್ರಾಮದ ಸುಮಾರು 70 ವರ್ಷದ ಟಿ.ಆರ್. ಪುಟ್ಟಾಚಾರ್ ಎಂಬ ವೃದ್ಧನು ನಾಟಕ ಕಲಿಸಲೆಂದು 2016ರ ಮಾರ್ಚ್ 13ರಂದು ಬೇರೆ ಊರಿಗೆ ಹೋದ ವನು ಇದುವರೆವಿಗೂ ಮರಳಿ ಬಂದಿಲ್ಲವೆಂದು ಈತನ ಮಗ ನಾರಾಯಣಾಚಾರ್ ಠಾಣೆಗೆ ದೂರು ನೀಡಿದ್ದಾರೆ.ಾಣೆಯಾದ ವ್ಯಕ್ತಿಯು 5.5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ, ತೆಳ್ಳನೆಯ ಶರೀರ ಹೊಂದಿದ್ದನು.

ಪ್ರಕರಣ–2: ಗೂಳೂರು ಹೋಬಳಿ ಎ.ಕೆ.ಕಾವಲ್ ವಡ್ಡರಹಳ್ಳಿಯ ಸುಮಾರು 60 ವರ್ಷದ ರಾಮಾಂಜನಪ್ಪ ಎಂಬ ವ್ಯಕ್ತಿಯು 2025ರ ಡಿಸೆಂಬರ್ 15ರಂದು ಕಾಣೆಯಾಗಿದ್ದಾನೆ. ಈತನು 5.5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ ಹೊಂದಿದ್ದಾನೆ.

ಕಾಣೆಂಯಾದವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ.ವಾ.ಸಂ. 0816–2 241036/ 2281120/2272451, ಮೊ.ಸಂ. 948080 2953–33–00ಯನ್ನು ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

ಬಿಎಸ್‌ಎನ್‌ಎಲ್ : ವಸತಿ ಗೃಹ ಬಾಡಿಗೆಗೆ ಲಭ್ಯ

ತುಮ ಕೂರು: ತುಮಕೂರು ಜಿಲ್ಲೆಯ ಅಶೋಕ ರಸ್ತೆಯಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿಯು ಚಿಕ್ಕನಾಯಕನಹಳ್ಳಿ ಮತ್ತು ಮಧುಗಿರಿ ಬಿಎಸ್‌ಎನ್‌ಎಲ್ ಕಚೇರಿ ಆವರಣದಲ್ಲಿ ಖಾಲಿಯಿರುವ ಸಿಬ್ಬಂದಿ ವಸತಿ ಗೃಹಗಳನ್ನು ಬಾಡಿಗೆಗೆ ನೀಡಲಿದ್ದು, ರಾಜ್ಯ/ ಕೇಂದ್ರ ಸರ್ಕಾರ, ಬ್ಯಾಂಕುಗಳ ಉದ್ಯೋಗಿಗಳಿಗೆ ಆದ್ಯತೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜೆಟಿಓ(ಜನರಲ್), ಬಿಎಸ್‌ಎನ್‌ಎಲ್, ತುಮ ಕೂರು, ಮೊ.ಸಂ.9449055621, 9481055363, 9480747678, 9483996995ನ್ನು ಸಂಪರ್ಕಿಸಬಹುದಾಗಿದೆ ಎಂದು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

EDITOR : RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.